ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ
ಪ್ರಕಟಣೆ

ಸಹಕಾರ

ವಾರ್ತಾ
ಪತ್ರಿಕೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಂಪುಟ : 3 ಸಂಚಿಕೆ : 8 ಆಗಸ್ಟ್ 2017

71ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಷಯಗಳು

ಭಾರತದ 14ನೇ ರಾಷ್ಟ್ರಪತಿಯಾಗಿ ಶ್ರೀ ರಾಮನಾಥ್ ಕೋವಿಂದ್ ಪ್ರಮಾಣ ವಚನ ಸ್ವೀಕಾರ

ಈಶ್ವರನ ಹೆಸರಿನಲ್ಲಿ 14ನೇ ರಾಷ್ಟ್ರಪತಿ ರಾಮನಾಥ ಕೋವಿಂದ್ ಪದಗ್ರಹಣ

ಹೊಸದಿಲ್ಲಿ : ಶ್ರೀ ರಾಮನಾಥ ಕೋವಿಂದ್ ದೇಶದ 14ನೇ ರಾಷ್ಟ್ರಪತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದು, ಸಂಸತ್ ಭವನದ ಸೆಂಟ್ರಲ್ ಹಾಲಿನಲ್ಲಿ ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಜೆಎಸ್ ಖೆಹರ್ ಅವರು ಪ್ರತಿಜ್ಞಾ ವಿಧಿ ಬೋಧನೆ ಮಾಡಿದರು. ಬಳಿಕ ದೇಶವನ್ನುದ್ದೇಶಿಸಿ ಭಾಷಣ ಮಾಡಿದ ಶ್ರೀ ರಾಮನಾಥ ಕೋವಿಂದ್ ಅವರು, 125 ಕೋಟಿ ಭಾರತೀಯರನ್ನು ಪ್ರತಿನಿಧಿಸುವ ಸಲುವಾಗಿ ನಾನು ಇಂದು ಇಲ್ಲಿ ನಿಂತಿದ್ದೇನೆ. ರಾಷ್ಟ್ರಪತಿ ಹುದ್ದೆ ನನಗೆ ಸಿಕ್ಕ ಅತೀ ದೊಡ್ಡ ಗೌರವ ಎಂದು ಹೇಳಿದರು.

ಇದೇ ವೇಳೆ ರಾಷ್ಟ್ರಪತಿ ಭವನದ ಘನತೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನನ್ನ ಸಂಪೂರ್ಣ ಸಾಮರ್ಥ್ಯ ಮೀರಿ ಕಾರ್ಯ ನಿರ್ವಹಿಸುತ್ತೇನೆ. ಮಾಜಿ ರಾಷ್ಟ್ರಪತಿಗಳಾದ ಶ್ರೀ ರಾಜೇಂದ್ರ ಪ್ರಸಾದ್ ರಿಂದ ಹಿಡಿದು ಶ್ರೀ ಪ್ರಣಬ್ ಮುಖರ್ಜಿ ಅವರ ವರೆಗಿನ ಎಲ್ಲ ರಾಷ್ಟ್ರಪತಿಗಳು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಡೆಯುತ್ತೇನೆ. ಎಲ್ಲರೂ ಅತ್ಯುತ್ತಮ ಮಾರ್ಗದರ್ಶಿಗಳಾಗಿದ್ದು, ದೇಶಕಂಡ ಅತ್ಯುತ್ತಮ ನಾಯಕರು. ಅದೇ ಶ್ರೇಷ್ಠತೆಯನ್ನು ಮುಂದುವರೆಸಿಕೊಂಡು ಹೋಗುವ ವಿಶ್ವಾಸ ತಮಗಿದೆ ಎಂದು ಶ್ರೀ ರಾಮನಾಥ್ ಕೋವಿಂದ್ ಬಣ್ಣಿಸಿದರು.

ಭಾರತದ ವಿವಿಧತೆಯಲ್ಲಿ ಏಕತೆ ಎಂಬ ವಿಚಾರವೇ ಇಡೀ ವಿಶ್ವದಲ್ಲಿ ಭಾರತ ಗೌರವವನ್ನು ಇಮ್ಮಡಿಗೊಳಿಸಿದೆ. ವಿವಿಧತೆಯಲ್ಲಿ ಏಕತೆ ಭಾರತದ ಅತೀ ದೊಡ್ಡ ಶಕ್ತಿ, ಒಗ್ಗಟ್ಟಿನಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ನಾವೆಲ್ಲರೂ ಒಗಟ್ಟಾಗಿದ್ದೇವೆ. ಮುಂದೆಯೂ ಒಗ್ಗೂಡಿಯೇ ಇರಲಿದ್ದೇವೆ ಎಂದು ಹೇಳಿದರು.

71 ವರ್ಷದ ಶ್ರೀ ರಾಮನಾಥ್ ಅವರು ಉತ್ತರ ಪ್ರದೇಶದ ಕಾನ್ಪುರದ ದೇಹಾತ್‌ನಲ್ಲಿ 1945ರ ಅಕ್ಟೋಬರ್ 1ರಂದು ಜನಿಸಿದರು. ವೃತ್ತಿಯಲ್ಲಿ ವಕೀಲರಾಗಿರುವ ಶ್ರೀ ರಾಮನಾಥ್ ಕೋವಿಂದ್ 1971ರಲ್ಲಿ ದೆಹಲಿ ಬಾರ್ ಕೌನ್ಸಿಲ್ ನೋಂದಣಿಯನ್ನು ಕೋವಿಂಗ್ ಪಡೆದಿದ್ದು, 1978ರಲ್ಲಿ ಸುಪ್ರೀಂಕೋರ್ಟ್ ವಕೀಲರಾಗಿ ದುಡಿದಿದ್ದಾರೆ.

2002ರಲ್ಲಿ ವಿಶ್ವಸಂಸ್ಥೆಯ (ನ್ಯೂಯಾರ್ಕ್) ಸಾಮಾನ್ಯ ಸಭೆಯಲ್ಲಿ ಭಾರತವನ್ನು ಪ್ರತಿನಿಧಿಸಿ ಮಾತನಾಡಿದ್ದಾರೆ. ಲಕ್ನೋನ ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾಲಯ ಹಾಗೂ ಕೋಲ್ಕತ್ತಾದ ಭಾರತೀಯ ಮ್ಯಾನೇಜ್‌ಮೆಂಟ್ ಸಂಸ್ಥೆ (ಐಐಎಂ) ಆಡಳಿತ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಶ್ರೀ ರಾಮನಾಥ್ ಕೋವಿಂದ್ 1994–2000 ಮತ್ತು 2000–2006ರ ತನಕ ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿದ್ದು, ನಂತರ ಅವರು 2015ರಲ್ಲಿ ಬಿಹಾರದ ರಾಜ್ಯಪಾಲರಾಗಿ ನೇಮಕಗೊಂಡರು.

ಶ್ರೀ ರಾಮನಾಥ್ ಕೋವಿಂದ್ ಅವರು ಒಬ್ಬ ರೈತನ ಮಗನಾಗಿದ್ದು, ನಮ್ರ ವ್ಯಕ್ತಿ ಹಾಗೂ ಒಬ್ಬ ಅನುಭವಸ್ಥ ವಕೀಲರಾಗಿದ್ದು, ಸಂವಿಧಾನದ ಬಗ್ಗೆ ಅವರಿಗಿರುವ ಜ್ಞಾನವೇ ಅವರನ್ನು ಅತ್ಯುತ್ತಮ ರಾಷ್ಟ್ರಪತಿ ಸ್ಥಾನಕ್ಕೆ ಕರೆತಂದಿದೆ.

ಸಿ.ಎಂ. ಮಾರೇಗೌಡ
ಅಧ್ಯಕ್ಷರು

"ರಾಜ್ಯದ ಸಹಕಾರ ಚಳವಳಿಯಲ್ಲಿ ಮಹಿಳೆಯರು, ಯುವಜನರ ಕೊರತೆ ಎದ್ದು ಕಾಣುತ್ತಿದೆ. ಆರು ಕೋಟಿ ಜನಸಂಖ್ಯೆಯಲ್ಲಿ ಎರಡು ಕೋಟಿ ಮೂವತ್ತು ಲಕ್ಷ ಸದಸ್ಯರ ಬಳಗವಿದೆ. ಸಹಕಾರ ಕ್ಷೇತ್ರದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಈ ಕ್ಷೇತ್ರದಲ್ಲಿ ಸಿಗುವ ಸೌಲಭ್ಯಗಳನ್ನು ಪಡೆದು, ಚಳವಳಿಯನ್ನು ಮುನ್ನಡೆಸಬೇಕಾಗಿದೆ."

ಪತ್ತಿನ ವಲಯ : ಸೇವೆಯೇ ಆದ್ಯತೆಯಾಗಲಿ

ಜನರಿಂದ, ಜನರಿಗಾಗಿಯೇ ಅವರುಗಳ ಆರ್ಥಿಕ ಅಭಿವೃದ್ಧಿಗಾಗಿಯೇ ಮುನ್ನಡೆಯುತ್ತಿರುವ ಸಹಕಾರ ಚಳವಳಿ ಇಂದು ಪ್ರಭಾವೀ ಚಳವಳಿಯಾಗಿ ಸೇವೆ ಸಲ್ಲಿಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸಹಕಾರ ಚಳವಳಿ ಸೇವೆಗಿಂತ ಲಾಭದ ದೃಷ್ಟಿಯಲ್ಲಿ ಮುನ್ನಡೆಯುತ್ತಿದ್ದರೂ ಸೇವಾ ಮನೋಭಾವಕ್ಕೆ ಹೆಚ್ಚಿನ ಮಹತ್ವ ನೀಡಬೇಕಾದ ಅನಿವಾರ್ಯತೆಯೂ ಇದೆ.

ಬಡತನ ನಿವಾರಣೆ, ಉದ್ಯೋಗ ಸೃಷ್ಟಿ, ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸಿಕೊಡುವಲ್ಲಿ ಸಹಕಾರ ಚಳವಳಿ ಜನರಿಗೆ ಹತ್ತಿರವಾಗಿದೆ. ಜಾತಿ-ಮತ-ಬೇದ-ಭಾವಗಳ ಬಗ್ಗೆ ಒಲವನ್ನು ಇರಿಸಿಕೊಳ್ಳದೇ ನಿಷ್ಪಕ್ಷಪಾತವಾಗಿ, ಸೇವಾ ಮನೋಭಾವದಿಂದ ಧ್ವನಿ ಇಲ್ಲದವರಿಗೆ ಧ್ವನಿಯಾಗಿ, ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಆರ್ಥಿಕ, ಪ್ರೇರಕ ಶಕ್ತಿಯಾಗಿ ಅಬಲರ ಆರ್ಥಿಕ ಪ್ರಗತಿಗೆ ಶ್ರಮಿಸುತ್ತಿದೆ.

ರಾಜ್ಯದ ಸಹಕಾರ ಚಳವಳಿಯಲ್ಲಿ ಮಹಿಳೆಯರು, ಯುವಜನರ ಕೊರತೆ ಎದ್ದು ಕಾಣುತ್ತಿದೆ. ರಾಜ್ಯದಲ್ಲಿ ಆರು ಕೋಟಿ ಜನಸಂಖ್ಯೆಯಲ್ಲಿ ಅಂದಾಜು ಎರಡು ಕೋಟಿ ಮೂವತ್ತು ಲಕ್ಷ ಸದಸ್ಯರ ಬಳಗವಿದೆ. ಸಹಕಾರ ಕ್ಷೇತ್ರದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಈ ಕ್ಷೇತ್ರದಲ್ಲಿ ಸಿಗುವ ಸೌಲಭ್ಯಗಳನ್ನು ಪಡೆದು, ಚಳವಳಿಯನ್ನು ಮುನ್ನಡೆಸಬೇಕಾಗಿದೆ.

ಸಹಕಾರಿ ಬಂಧುಗಳೇ, ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬರಗಾಲ ತೀವ್ರಗೊಂಡಿದೆ. ರೈತರು ಸಂಕಷ್ಟದಲ್ಲಿದ್ದಾರೆ. ಸರ್ಕಾರ ರೈತರ ನೆರವಿಗೆ ಧಾವಿಸಿ, ಅಲ್ಪಮಟ್ಟಿಗೆ ನೆರವಾಗಿದೆ. ಪತ್ತಿನ ಸಹಕಾರ ಸಂಘಗಳು ಆರ್ಥಿಕ ನೆರವು ಬಯಸಿ ಬರುವ ತಮ್ಮ ಸದಸ್ಯರುಗಳಿಗೆ ಹೆಚ್ಚಿನ ನೆರವು ನೀಡಿ, ಸಾಲ ಮರುಪಾವತಿ ಬಗ್ಗೆ ಜಾಗೃತಿ, ಅರಿವು ಮೂಡಿಸಿ ಅವರಲ್ಲಿ ಸಹಕಾರ ಸಂಸ್ಥೆಗಳ ಬಗ್ಗೆ ಹೆಚ್ಚು ಅಭಿಮಾನ ಬೆಳೆಸಿಕೊಳ್ಳುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನಾವೂ ಸಂಕಷ್ಟದಲ್ಲಿರುವ ಸದಸ್ಯರಿಗೆ ನೆರವಾಗೋಣ, ಅವರ ಆರ್ಥಿಕ ಅಭಿವೃದ್ಧಿಯಲ್ಲಿ ಪಾಲುದಾರರಾಗೋಣ.

ದೇಶದ 71ನೇ ಸ್ವಾತಂತ್ರ್ಯೋತ್ಸವಕ್ಕೆ ಎಲ್ಲಾ ಸಹಕಾರಿಗಳಿಗೂ ಹಾರ್ದಿಕ ಶುಭಾಶಯಗಳು ಹಾಗೂ ರಾಷ್ಟ್ರದ ನೂತನ 14ನೇ ರಾಷ್ಟ್ರಪತಿಯಾಗಿರುವ ಶ್ರೀ ರಾಮನಾಥ ಕೋವಿಂದ್ ಅವರಿಗೆ ಎಲ್ಲಾ ಸಹಕಾರಿಗಳ ಪರವಾಗಿ ಶುಭಾಶಯಗಳು ಕೋರುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು–560003

ದೂರವಾಣಿ ಸಂಖ್ಯೆ : 080–23564444 / 23464033

ಇ–ಮೇಲ್ : info@ksccsf.org

ksccsfltd@gmail.com, www.ksccsf.org

ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

ಶ್ರೀ ಸಿ.ಎಂ. ಮಾರೇಗೌಡ

ಸದಸ್ಯರು

ಶ್ರೀ ಕೆ.ಎಲ್. ಶಿವರಾಮು

ಶ್ರೀ ಕೆ. ಕೃಷ್ಣಮೂರ್ತಿ

ಶ್ರೀ ಬಿ. ವೀರಯ್ಯ

ಶ್ರೀ ಹೊನ್ನಯ್ಯ ವಿ. ಹಿರೇಮಠ

ಮುಖ್ಯಕಾರ್ಯನಿರ್ವಹಣಾಧಿಕಾರಿ

ಶ್ರೀ ಕೆ.ಎಸ್. ಗುರುಪ್ರಸಾದ್

ಓದುಗರ ಪತ್ರ

ಮಾನ್ಯರೇ, ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಮಾರೇಗೌಡರ ನೇತೃತ್ವದಲ್ಲಿ ಪ್ರಕಟಣೆಗೊಳ್ಳುತ್ತಿರುವ 'ಸಹಕಾರ ಮಾಸಿಕ ಪತ್ರಿಕೆ' ಉತ್ತಮ ಸಂಚಿಕೆಯಾಗಿ ಹೊರಹೊಮ್ಮುತ್ತಿದೆ. ಅಂಕಣಗಳು, ಲೇಖನಗಳು ಅತ್ಯುತ್ತಮ ಮಾಹಿತಿಯನ್ನು ಸಹಕಾರಿಗಳಿಗೆ ನೀಡುತ್ತಿದೆ. ಪ್ರಸಕ್ತ ವಿದ್ಯಮಾನಗಳು ಸಹಕಾರಿ ಕ್ಷೇತ್ರದಲ್ಲಿ ನಡೆಯುತ್ತಿರುವ ಆಮೂಲಾಗ್ರ ಬದಲಾವಣೆಗಳು ಮುಂತಾದ ವಿಚಾರಗಳನ್ನು ಒಳಗೊಂಡಂತೆ ಅರ್ಥಪೂರ್ಣವಾದ ವಿವರಣೆಗಳು, ನುರಿತ ನಿಪುಣದಿಂದ ಪ್ರಸ್ತುತಗೊಳಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ಸಹಕಾರಿ ಕ್ಷೇತ್ರ ಸಾರ್ವಜನಿಕ ಸೇವಾ ವಲಯದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ. ತನ್ನ ಸದಸ್ಯರ ಹಿತಾಸಕ್ತಿಯನ್ನು ಕಾಯ್ದುಕೊಂಡು ತನ್ನ ಬೆಳವಣಿಗೆಯನ್ನು ವೃದ್ಧಿಸಿಕೊಳ್ಳುವಲ್ಲಿ ಅನೇಕ ಮಾರ್ಗೋಪಾಯಗಳನ್ನು ಹುಡುಕಿಕೊಂಡು ಯಶಸ್ವಿಯಾಗುತ್ತಿರುವುದನ್ನು ಕಾಣುತ್ತಿದ್ದೇವೆ, ಇಂದಿನ ಆರ್ಥಿಕ ಸ್ಪರ್ಧಾತ್ಮಕ ವೇಗದೊಂಗಿದೆ ತನ್ನ ಚಲನೆಯನ್ನು ದಾಖಲಿಸುವ ನಿಖರ ಪ್ರಯತ್ನಗಳನ್ನು ಸಹಕಾರಿ ಕ್ಷೇತ್ರ ಸಾಬೀತುಗೊಳಿಸಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆ ಪೂರಕವೆಂಬಂತೆ ಸಹಕಾರಿ ಕ್ಷೇತ್ರಕ್ಕೆ ಮಾರ್ಗದರ್ಶಿಯಾಗಿ ಮಹಾಮಂಡಳಿಗಳು ಕ್ರಿಯಾತ್ಮಕವಾಗಿ ಮುನ್ನಡೆಯುತ್ತಿರುವುದು ಅತ್ಯಂತ ಹೆಮ್ಮೆಯ ವಿಚಾರವಾಗಿರುತ್ತದೆ. ತಮ್ಮ ಮಾರ್ಗದರ್ಶನದಲ್ಲಿ ಸಹಕಾರಿ ಪತ್ರಿಕೆ ಯಶಸ್ವಿಯಾಗಿ ಮುನ್ನಡೆಯಲೆಂದು ಈ ಮೂಲಕ ಹಾರೈಸುತ್ತೇನೆ.

– ಶ್ರೀ ಎನ್. ಕೃಷ್ಣಪ್ಪ,
ಅಧ್ಯಕ್ಷರು, ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
ಸಂಪಂಗಿ ರಾಮನಗರ, ಬೆಂಗಳೂರು.

ಸುಭಾಷಿತ : ತಾತ್ಕಾಲಿಕ ಭಾವಾವೇಶಗಳಿಗಾಗಿ ಶಾಶ್ವತವಾದ ನಿರ್ಧಾರಗಳನ್ನು ಕೈಗೊಳ್ಳಬೇಡಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.

ಐದು ವರ್ಷಗಳ ಚಂದಾ: ರೂ : 1500/-

ಸೂಚನೆ : ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.

- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

ಶಿದ್ಧನಗೌಡ ಸಂಣರಾಮನಗೌಡ ಪಾಟೀಲ 'ಸಹಕಾರ ಸೌಧ' ಉದ್ಘಾಟನೆ

ಸಮಾಜದ ಎಲ್ಲ ವರ್ಗದವರಿಗೂ ಸಮಾನ ಸವಲತ್ತುಗಳು ಸಿಗಬೇಕು, ಅದು ಸಹಕಾರ ಕ್ಷೇತ್ರದಿಂದ ಮಾತ್ರ ಸಾಧ್ಯ - ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ

ಬೆಂಗಳೂರು : ಸಹಕಾರ ಇಲಾಖೆ ನಗರದ ಮಲ್ಲೇಶ್ವರದಲ್ಲಿ ಶಿದ್ಧನಗೌಡ ಸಂಣರಾಮನಗೌಡ ಪಾಟೀಲರ ಸ್ಮರಣಾರ್ಥ ನಿರ್ಮಿಸಿರುವ 'ಸಹಕಾರ ಸೌಧ'ವನ್ನು ಜುಲೈ 7ರಂದು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು, 'ಸಹಕಾರ ಸಂಸ್ಥೆಗಳು ಕೇವಲ ಲಾಭದ ಉದ್ದೇಶದಿಂದಷ್ಟೇ ಕೆಲಸ ಮಾಡಬಾರದು' ಎಂದು ಸಲಹೆ ನೀಡಿದರು.

ಸಮಾಜದ ಎಲ್ಲ ವರ್ಗದವರಿಗೂ ಸಮಾನ ಸವಲತ್ತುಗಳು ಸಿಗಬೇಕು, ಅದು ಸಹಕಾರ ಕ್ಷೇತ್ರದಿಂದ ಮಾತ್ರ ಸಾಧ್ಯ. ಇದನ್ನು ಗಮನದಲ್ಲಿರಿಸಿಕೊಂಡು ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸಬೇಕು ಎಂದರು. 'ರಾಜ್ಯದಲ್ಲಿ ಒಟ್ಟು 41,000 ವಿವಿಧ ರೀತಿಯ ಸಹಕಾರ ಸಂಘಗಳಿವೆ. 2.5 ಕೋಟಿ ಜನ ಸದಸ್ಯರಿದ್ದಾರೆ. 24 ಲಕ್ಷ ರೈತರಿಗೆ ರೂ. 11,000 ಕೋಟಿ ಸಾಲದ ರೂಪದಲ್ಲಿ ವಿತರಣೆಯಾಗಿದೆ. ಅದರಲ್ಲಿ 22.27 ಲಕ್ಷ ರೈತರ ರೂ. 8,165 ಕೋಟಿ ಸಾಲ ಮನ್ನಾ ಮಾಡಿದ್ದೇವೆ' ಎಂದು ವಿವರಿಸಿದರು.

ಕರ್ನಾಟಕದಲ್ಲಿ 1905ರಲ್ಲಿ ಗದಗಿನ ಕಣಗಿನಹಾಳದಲ್ಲಿ ಶಿದ್ಧನಗೌಡ ಸಂಣರಾಮನಗೌಡ ಪಾಟೀಲರು ಮೊದಲ ಸಹಕಾರ ಸಂಘವನ್ನು ಸ್ಥಾಪಿಸುವ ಮೂಲಕ ಸಹಕಾರ ಚಳವಳಿಗೆ ಭದ್ರಬುನಾದಿ ಹಾಕಿದ್ದ ಸಹಕಾರ ವಲಯ ಇಂದು ಹೆಮ್ಮರವಾಗಿ ಬೆಳೆದಿದೆ. ಕರ್ನಾಟಕದಲ್ಲಿ ಎರಡೂವರೆ ಕೋಟಿ ಸದಸ್ಯರ ಬಳಗವನ್ನು ಹೊಂದಿರುವ ಈ ಕ್ಷೇತ್ರ ಆರ್ಥಿಕ ವ್ಯವಸ್ಥೆಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ ಎಂದು ಮುಖ್ಯಮಂತ್ರಿಯವರು ಶ್ಲಾಘಿಸಿದರು.

ಕೇಂದ್ರ ಸಚಿವ ಶ್ರೀ ಡಿ.ವಿ. ಸದಾನಂದಗೌಡರು ಮಾತನಾಡಿ,

> ರಾಜ್ಯದಲ್ಲಿ ಕಳೆದ ವರ್ಷ ಸಹಕಾರ ಸಂಘಗಳ ಮೂಲಕ ಅಲ್ಪಾವಧಿ ಕೃಷಿ ಸಾಲವಾಗಿ ಹನ್ನೊಂದುವರೆ ಸಾವಿರ ಕೋಟಿ ರೂ. ಗಳನ್ನು ನೀಡಲಾಗಿತ್ತು. ಬರದ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ರೈತರ ಕೃಷಿ ಸಾಲ ರೂ. 8,165 ಕೋಟಿ ಮನ್ನಾ ಮಾಡಿದ್ದು, ಇದರಿಂದಾಗಿ ರಾಜ್ಯದ 22.27ಲಕ್ಷ ರೈತರು ಫಲಾನುಭವಿಗಳಾಗಿದ್ದಾರೆ

'ಜಾಗತಿಕ ಆರ್ಥಿಕ ಕುಸಿತದ ಸಂದರ್ಭದಲ್ಲಿ ಅನೇಕ ದೇಶಗಳು ತೊಂದರೆಗೆ ಸಿಲುಕಿದವು. ಆದರೆ, ನಮ್ಮಲ್ಲಿ ಜನರಿಗೆ ಉಳಿತಾಯದ ಪರಿಕಲ್ಪನೆ ಇರುವುದು ಮತ್ತು ಹೆಚ್ಚಾಗಿ ಸಹಕಾರ ಬ್ಯಾಂಕ್‌ಗಳನ್ನು ಅವಲಂಬಿಸಿರುವುದರಿಂದ ಹೆಚ್ಚಿನ ತೊಂದರೆ ಆಗಲಿಲ್ಲ' ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಶೇ.65ರಷ್ಟು ರೈತಾಪಿ ವರ್ಗ, ತಮ್ಮ ಆರ್ಥಿಕಾಭಿವೃದ್ಧಿಗಾಗಿ ಸಹಕಾರಿ ರಂಗವನ್ನು ಅವಲಂಬಿಸಿದ್ದು, ಮುಂದಿನ ದಿನಗಳಲ್ಲಿಯೂ ಕೂಡ ದೇಶದ ಆರ್ಥಿಕ ಸ್ಥಿತಿಯನ್ನು ಸಮತೋಲನದಲ್ಲಿಟ್ಟುಕೊಳ್ಳಲು ಸಹಕಾರಿ ವ್ಯವಸ್ಥೆ ಸಹಾಯಕವಾಗುತ್ತದೆಂದು ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಲ್ಲೇಶ್ವರಂ ಕ್ಷೇತ್ರದ ಶಾಸಕರಾದ ಡಾ। ಸಿ.ಎನ್. ಅಶ್ವಥ್‌ನಾರಾಯಣ್ ಅವರು ಮಾತನಾಡಿ, ಸಹಕಾರಿ ಚಳವಳಿಯ ಪಿತಾಮಹರಾದ ಶಿದ್ಧನಗೌಡರ ಹೆಸರನ್ನು

ಸಹಕಾರ ಸೌಧಕ್ಕೆ ಇಟ್ಟಿರುವುದು ಅರ್ಥಗರ್ಭಿತವಾಗಿದೆ ಎಂದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಸಾರಿಗೆ ಸಚಿವರಾದ ಶ್ರೀ ರಾಮಲಿಂಗಾ ರೆಡ್ಡಿ, ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಎಸ್.ಟಿ. ಸೋಮಶೇಖರ್, ಶಾಸಕರುಗಳಾದ ಶ್ರೀ ಬೈರತಿ ಬಸವರಾಜು, ಶ್ರೀ ಟಿ.ಎ. ಶರವಣ, ಸಹಕಾರ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಮಹೇಶ್ವರ ರಾವ್, ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಎಂ.ಕೆ. ಅಯ್ಯಪ್ಪ, ಸಹಕಾರ ಸಂಘಗಳ ಅಪರ ನಿಬಂಧಕರುಗಳಾದ ಶ್ರಿ ಬಿ.ಎಸ್. ಹರೀಶ್, ಶ್ರೀ ಬಿ.ಸಿ. ಸತೀಶ್, ಶ್ರೀ ಕೆ.ಎಸ್. ನವೀನ್, ಶ್ರೀ ಆರ್. ಶ್ರೀಧರ್, ಶ್ರೀ ಆರ್. ದಿವಾಕರ್, ಶ್ರೀ ವೈ. ಹೆಚ್. ಗೋಪಾಲಕೃಷ್ಣ, ಬೆಂಗಳೂರು ಪ್ರಾಂತ್ಯ ಜಂಟಿ ನಿಬಂಧಕರಾದ ಶ್ರೀ ಪಾಂಡುರಂಗ ಗರಗ್ ಕಲಬುರಗಿ ಜಂಟಿ ನಿಬಂಧಕರಾದ ಶ್ರೀ ಐ.ಎಸ್. ಗಿರಡ್ಡಿ, ಮೈಸೂರು ಜಂಟಿ ನಿಬಂಧಕರಾದ ಶ್ರೀ ಜೋಷಿ, ಬೆಳಗಾವಿ ಜಂಟಿನಿಬಂಧಕರಾದ ಶ್ರೀ ಶ್ರೀ ಎಂ.ಡಿ. ಮಲ್ಲೂರ ಅವರುಗಳು ಸೇರಿದಂತೆ ಇಲಾಖೆಯ ಹಿರಿಯ – ಕಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಎಂ.ಕೆ. ಅಯ್ಯಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು.

ಈ ಸಹಕಾರ ಸೌಧ ದಿ. ಎಚ್.ಎಸ್. ಮಹದೇವ ಪ್ರಸಾದ್ ಅವರ ಕನಸಿನ ಕೂಸು. ಈಗ ಅವರು ನಮ್ಮೊಂದಿಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೆನಪಿಸಿಕೊಂಡರು.

ಸಹಕಾರ ಸೌಧಕ್ಕೆ ಶಿದ್ಧನಗೌಡ ಪಾಟೀಲ ಹೆಸರು

ಕಟ್ಟಡ ಶಿಲಾನ್ಯಾಸ ಸಂದರ್ಭದಲ್ಲಿ ಸಹಕಾರ ಸೌಧಕ್ಕೆ ಸಹಕಾರ ಪಿತಾಮಹ ಶಿದ್ಧನಗೌಡ ಸಂಣರಾಮನಗೌಡ ಪಾಟೀಲರ ಹೆಸರು ನಾಮಕರಣ ಮಾಡುವುದಾಗಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಘೋಷಿಸಿದ್ದರು. ಅದರಂತೆ ಈ ಸೌಧಕ್ಕೆ ಶಿದ್ಧನಗೌಡರ ಹೆಸರಿಡಲಾಗಿದೆ. ಶಿದ್ಧನಗೌಡ ಪಾಟೀಲ ಅವರು ಇಂದಿನ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ 1905ರಲ್ಲಿ ಸಹಕಾರ ಸಂಘ ಸ್ಥಾಪಿಸಿದ್ದರು.

ಇದು ಭಾರತದಲ್ಲೇ ಮೊದಲ ಕೃಷಿ ಪತ್ತಿನ ಸಹಕಾರ ಸಂಘವಾಗಿ ನೋಂದಾಯಿತಗೊಂಡಿದೆ. ಸಹಕಾರ ಚಳವಳಿ ಆರಂಭಿಸಿದ್ದಕ್ಕಾಗಿ ಸಹಕಾರ ಪಿತಾಮಹಾ ಎಂದೂ ಅವರನ್ನು ಕರೆಯಲಾಗುತ್ತದೆ. ಈ ಬೃಹತ್ ಸೌಧಕ್ಕೆ ಅವರ ಹೆಸರಿಟ್ಟಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ಎನ್. ಧರ್ಮಸಿಂಗ್ ನಿಧನ : ಸಂತಾಪ ಸೂಚನೆ

ಬೆಂಗಳೂರು : ಮಾಜಿ ಮುಖ್ಯಮಂತ್ರಿ, ಮಾಜಿ ಲೋಕಸಭಾ ಸದಸ್ಯರಾದ ಶ್ರೀ ಎನ್. ಧರ್ಮಸಿಂಗ್ ರವರು ಜುಲೈ 27, 2017 ರಂದು ಹೃದಯಾಘಾತದಿಂದ ನಿಧನರಾದರು. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿ ಶ್ರೀಯುತರ ನಿಧನಕ್ಕೆ ಸಂತಾಪ ಸೂಚಿಸಿದೆ.

ವಿತ್ತೀಯ ವರ್ಷಾವಧಿ ಜನವರಿಯಿಂದ ಡಿಸೆಂಬರಿಗೆ ಬದಲಾವಣೆ : ಅರುಣ್ ಜೇಟ್ಲಿ

ನವದೆಹಲಿ : ಆರ್ಥಿಕ ವರ್ಷವನ್ನು ಜನವರಿಯಿಂದ ಡಿಸೆಂಬರ್‌ಗೆ ಬದಲಾಯಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆ ಎಂದು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಲೋಕಸಭೆಗೆ ತಿಳಿಸಿದ್ದಾರೆ.

ಆರ್ಥಿಕ ವರ್ಷವನ್ನು ಏಪ್ರಿಲ್ ನಿಂದ ಮಾರ್ಚ್ ಬದಲು ಜನವರಿಯಿಂದ ಡಿಸೆಂಬರ್‌ಗೆ ಬದಲಾಯಿಸುವ ವಿಚಾರ ಪರಿಶೀಲನೆಯಲ್ಲಿದೆ ಎಂದು ಅರುಣ್ ಜೇಟ್ಲಿ ಅವರು ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ್ದಾರೆ. ಫೆಬ್ರವರಿ 2018ರಿಂದ ಸಾಮಾನ್ಯ ಬಜೆಟ್ ಅನ್ನು ನವೆಂಬರ್ ಅಥವಾ ಡಿಸೆಂಬರ್ ನಲ್ಲಿ ಮಂಡಿಸಬಹುದೇ ಎಂಬುದರ ಬಗ್ಗೆ ವಿವರಣೆ ನೀಡಲು ಅವರು ನಿರಾಕರಿಸಿದರು.

ಏಪ್ರಿಲ್‌ನಿಂದ ಮಾರ್ಚ್‌ವರೆಗಿನ ಆರ್ಥಿಕ ವರ್ಷದ ಕಾರಣದಿಂದ ರೈತರಿಗೆ ಸಿಗಬೇಕಾದ ಸರ್ಕಾರಿ ಸೌಲಭ್ಯಗಳು ಸರಿಯಾದ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಹೀಗಾಗಿ ಜನವರಿ 1 ರಿಂದ ಡಿಸೆಂಬರ್ 31ರವರೆಗೆ ಅನ್ವಯವಾಗುವಂತೆ ಆರ್ಥಿಕ ವರ್ಷ ರೂಪಿಸಲು ಚಿಂತನೆ ನಡೆದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚಿಗೆ ನೀತಿ ಆಯೋಗದ ಸಭೆಯಲ್ಲಿ ಹೇಳಿದ್ದರು.

ಈಗಿರುವ ಪದ್ಧತಿಯಂತೆ ಹಣಕಾಸು ವರ್ಷ ಆರಂಭವಾಗುವ ಏಪ್ರಿಲ್ 1ರಿಂದ ಜನವರಿ 1ಕ್ಕೆ ಬದಲಾಯಿಸುವ ಸಾಧ್ಯತೆಗಳನ್ನು ಅಧ್ಯಯನ ನಡೆಸಲು ಸರ್ಕಾರ ಕಳೆದ ವರ್ಷ ಉನ್ನತ ಮಟ್ಟದ ಸಮಿತಿಯನ್ನು ಸ್ಥಾಪಿಸಿತ್ತು. ಸಮಿತಿ ಕಳೆದ ಡಿಸೆಂಬರ್ ನಲ್ಲಿ ವರದಿಯನ್ನು ಮಂಡಿಸಿತ್ತು. ವಿವಿಧ ಕೃಷಿ ಬೆಳೆಗಳ ಅವಧಿಗಳ ಮೇಲೆ ಇದರ ಪರಿಣಾಮ ಮತ್ತು ವ್ಯಾಪಾರ, ವಹಿವಾಟಿನ ಮೇಲೆ ಅದರ ಪರಿಣಾಮ, ತೆರಿಗೆ ವ್ಯವಸ್ಥೆ ಮತ್ತು ಪ್ರಕ್ರಿಯೆಗಳು, ಅಂಕಿಅಂಶಗಳು ಮತ್ತು ದಾಖಲೆಗಳ ಸಂಗ್ರಹದ ಮೇಲಿನ ಪರಿಣಾಮಗಳ ಕುರಿತು ಸಮಿತಿ ವರದಿ ಸಲ್ಲಿಸಿದೆ.

ಆರ್‌ಬಿಐನಿಂದ ಶೀಘ್ರವೇ 20 ಹಾಗೂ 200 ರೂ. ನೋಟು ಚಲಾವಣೆಗೆ

ಹೊಸದಿಲ್ಲಿ : ಭಾರತೀಯ ರಿಸರ್ವ್ ಬ್ಯಾಂಕ್ ಶೀಘ್ರದಲ್ಲೇ 200 ರೂ. ಮೌಲ್ಯದ ನೋಟುಗಳನ್ನು ಪರಿಚಯಿಸಲಿದೆ ಅಂತೆಯೇ ಅದು 200 ರೂ. ನೋಟುಗಳ ಮುದ್ರಣಕ್ಕೆ ಆದೇಶ ನೀಡಿದೆ ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.

200 ರೂ. ನೋಟುಗಳನ್ನು ಪರಿಚಯಿಸುವ ನಿರ್ಧಾರವನ್ನು ಆರ್‌ಬಿಐ ಕಳೆದ ಮಾರ್ಚ್ ತಿಂಗಳಲ್ಲೇ ಹಣಕಾಸು ಸಚಿವಾಲಯದ ಜತೆಗೆ ಸಮಾಲೋಚಿಸಿ ಕೈಗೊಂಡಿತ್ತು. ಈಗಿನ್ನು ಆರ್‌ಬಿಐ ಶೀಘ್ರವೇ 200 ರೂ. ನೋಟು ಚಲಾವಣೆಗೆ ತರುವ ಕುರಿತಾಗಿ ಅಧಿಸೂಚನೆಯನ್ನು ಹೊರಡಿಸಲಿದೆ.

200 ರೂ. ನೋಟು ಮುದ್ರಣ ಶುರು : 200 ರೂ. ನೋಟು ಬಿಡುಗಡೆಗೆ ರಿಸರ್ವ್ ಬ್ಯಾಂಕ್ ತೀರ್ಮಾನಿಸಿರುವಂತೆಯೇ, ನೋಟು ಮುದ್ರಣ ಆರಂಭಗೊಂಡಿದೆ.

ಹೊಸ 20 ರೂ. ನೋಟು ಶೀಘ್ರ ಮಾರುಕಟ್ಟೆಗೆ : ಭಾರತೀಯ ರಿಸರ್ವ್ ಬ್ಯಾಂಕ್ ಸದ್ಯದಲ್ಲೇ 20 ರೂ.ನ ಹೊಸ ನೋಟುಗಳನ್ನು ಬಿಡುಗಡೆ ಮಾಡುವುದಾಗಿ ಹೇಳಿಕೆ ನೀಡಿದೆ.

2005ರ ಮಹಾತ್ಮ ಗಾಂಧಿಯ ಸರಣಿಯಲ್ಲಿ ಈ ಹೊಸ ನೋಟುಗಳನ್ನು ಬಿಡುಗಡೆ ಮಾಡುವುದಾಗಿ ಆರ್‌ಬಿಐ ಹೇಳಿದ್ದು, ಈ ನೋಟುಗಳ ಸಂಖ್ಯಾ ಫಲಕಗಳ ಮೇಲೆ ಎಸ್ ಎಂಬ ಅಕ್ಷರವನ್ನು ಅಳವಡಿಸಲಾಗುತ್ತದೆ ಎಂದಿದೆ. ಅಲ್ಲದೇ ಪ್ರಸಕ್ತ ಆರ್‌ಬಿಐ ಗವರ್ನರ್ ಉರ್ಜಿತ್ ಪಟೇಲ್ ಅವರ ಸಹಿ ಕೂಡ ಈ ನೋಟುಗಳಲ್ಲಿ ಕಾಣಿಸಿಕೊಳ್ಳಲಿದೆ.

ಈಗಿರುವ 20ರೂ. ನೋಟಿನ ಮೇಲೆ ಯಾವುದೇ ನಿಷೇಧ ಹೇರುವುದಿಲ್ಲ, ಅಲ್ಲದೇ ನೂತನವಾಗಿ ಬಿಡುಗಡೆಗೊಳ್ಳುವ ನೋಟುಗಳ ವಿನ್ಯಾಸದಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ. ಈಗಾಗಲೇ ನೋಟುಗಳ ಮುದ್ರಣ ಕಾರ್ಯ ಆರಂಭವಾಗಿದ್ದು, ಶೀಘ್ರದಲ್ಲೇ ಬ್ಯಾಂಕ್‌ಗಳಿಗೆ ವಿತರಣೆಯಾಗಲಿದೆ ಎಂದು ಆರ್‌ಬಿಐ ಹೇಳಿದೆ.

ತುಮಕೂರು ಬಸವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ವಾರ್ಷಿಕ ಮಹಾಸಭೆ – ರಜತ ಮಹೋತ್ಸವ ಆಚರಣೆ ರೂ. 3.70 ಕೋಟಿ ರೂ. ನಿವ್ವಳ ಲಾಭ

ತುಮಕೂರು ಬಸವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ 25ನೇ ವರ್ಷದ ರಜತ ಮಹೋತ್ಸವ, ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತ್ಯುತ್ಸವ, ಡಾ। ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 110ನೇ ವರ್ಷದ ಗುರುವಂದನ ಕಾರ್ಯಕ್ರಮವನ್ನು ಶ್ರೀಮತಿ ರತ್ನಕಲಾ ರವರು ಗೌರವಾನ್ವಿತ ನ್ಯಾಯಮೂರ್ತಿಗಳು, ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಮ.ನಿ.ಪ್ರ.ಸ್ವ. ಶ್ರೀ ಶ್ರೀ ಅಟವೀ ಶಿವಲಿಂಗ ಮಹಾಸ್ವಾಮಿಗಳು ಸುಕ್ಷೇತ್ರ, ಚಿಕ್ಕತೊಟ್ಲುಕೆರೆ, ತುಮಕೂರು, ಶ್ರೀ ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮಿಗಳು ಸುಕ್ಷೇತ್ರ, ಕೆರೆಗೋಡಿ ರಂಗಾಪುರ, ತಿಪಟೂರು, ಡಾ। ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಮಠ ತುಮಕೂರು, ಶ್ರೀ ಜಿ ಎಸ್ ಬಸವರಾಜುರವರು, ಮಾಜಿ ಲೋಕಸಭಾ ಸದಸ್ಯರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಸಿ.ಎಂ. ಮಾರೇಗೌಡರು, ಜಂಟಿ ನಿಬಂಧಕರಾದ ಶ್ರೀ ಎಂ.ಡಿ. ನರಸಿಂಹಮೂರ್ತಿ ಹಾಗೂ ಸೊಸೈಟಿಯ ಅಧ್ಯಕ್ಷರಾದ ಶ್ರೀ ಟಿ ಸಿ ಓಹಿಲೇಶ್ವರರವರು, ಉಪಾಧ್ಯಕ್ಷರಾದ ಶ್ರೀ ಎಸ್ ಎಂ ರಾಜುರವರು ಮತ್ತು ನಿರ್ದೇಶಕರುಗಳು ಉಪಸ್ಥಿತರಿದ್ದರು.

ತುಮಕೂರು ಬಸವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ತನ್ನ ವಾರ್ಷಿಕ ಮಹಾಸಭೆಯನ್ನು ಏರ್ಪಡಿಸಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಟಿ.ಸಿ. ಓಹಿಲೇಶ್ವರ ಅವರು ವಹಿಸಿದ್ದರು. ಸಭೆಯಲ್ಲಿ ಸಂಘದ ಸಾಧನೆಗಳನ್ನು ವಿವರಿಸಲಾಯಿತು. 2016–17ನೇ ಸಾಲಿನಲ್ಲಿ ಸಂಘವು ರೂ. 3.70 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ. ಸದಸ್ಯರಿಗೆ ಶೇ. 20 ರಷ್ಟು ಲಾಭಾಂಶವನ್ನು ಘೋಷಿಸಲಾಯಿತು.

ಸಂಘದ ಪ್ರಗತಿ ನೋಟ : ಸಂಘವು ದಿನಾಂಕ: 29.4.1992 ರಲ್ಲಿ ನೋಂದಣಿಯಾಗಿರುತ್ತದೆ. ಪ್ರಾರಂಭದಲ್ಲಿ 1102 ಸದಸ್ಯರಿಂದ ರೂ.5.50 ಲಕ್ಷ ಷೇರು ಬಂಡವಾಳ, ಠೇವಣಿ ರೂ.4.55 ಲಕ್ಷಗಳು ಹಾಗೂ ಸದಸ್ಯರಿಗೆ ರೂ. 7.46 ಲಕ್ಷಗಳನ್ನು ಸಾಲವಾಗಿ ನೀಡುವುದರ ಮೂಲಕ ಅಧಿಕೃತವಾಗಿ ತನ್ನ ಕಾರ್ಯ ಚಟುವಟಿಕೆಯನ್ನು ಪ್ರಾರಂಭಿಸಿತು. ಸಂಘದ ಸಂಸ್ಥಾಪನಾ ಅಧ್ಯಕ್ಷರಾದ ದಿವಂಗತ ಶ್ರೀ ಜಿ.ಎಸ್.ಪ್ರಸಾದ್ ರವರು 1992–93 ರಿಂದ 1997–98ನೇ ಸಾಲಿನವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಇವರ ನಂತರ ದಿವಂಗತ ಶ್ರೀ ಹೆಚ್ ವಿ ಸಿದ್ದಲಿಂಗಯ್ಯರವರು 1998–99 ರಿಂದ 1999–2000ರವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

ಪ್ರಸ್ತುತ ಸಂಘದ ಅಧ್ಯಕ್ಷರಾದ ಶ್ರೀ ಟಿ.ಸಿ. ಓಹಿಲೇಶ್ವರ ರವರು ದಿನಾಂಕ : 17–05–2000 ವರ್ಷದಿಂದ ಅಧಿಕಾರ ವಹಿಸಿಕೊಂಡು ಇವರ ದಕ್ಷ ನಾಯಕತ್ವದಲ್ಲಿ ಸೂಕ್ತ ಮಾರ್ಗದರ್ಶನದಿಂದ ಕಳೆದ 17 ವರ್ಷಗಳಿಂದ ನಿರ್ದೇಶಕ ಮಂಡಳಿಯ ಸದಸ್ಯರ ಸಲಹೆ

ಸಂಘದ ಪ್ರಗತಿ ಪಕ್ಷಿನೋಟ (ರೂ. ಲಕ್ಷಗಳಲ್ಲಿ)				
ಕ್ರ.ಸಂ	ವಿವರಗಳು	2015–16	2016–17	% ಬೆಳವಣಿಗೆ
1.	ಸದಸ್ಯರು	2484	2765	11.31 %
2.	ಷೇರು ಬಂಡವಾಳ	341.33	399.61	17.07 %
3.	ಆಪದ್ಧನ ನಿದಿ+ಇತರೆ ನಿಧಿ	792.62	1057.70	33.44 %
4.	ಠೇವಣಿಗಳು	10016.44	12810.93	27.90 %
5.	ದುಡಿಯುವ ಬಂಡವಾಳ	11150.17	14268.23	27.96 %
6.	ಮುಂಗಡ ಸಾಲಗಳು	9290.52	10752.48	15.74 %
7.	ಒಟ್ಟು ಲಾಭ	1402.97	1854.55	32.19 %
8.	ನಿವ್ವಳ ಲಾಭ	314.92	370.88	17.77 %
9.	ಡಿವಿಡೆಂಡ್	18%	20%	–
10.	ವರ್ಗೀಕರಣ (ಗ್ರೇಡ್)	ಎ	ಎ	–
11.	ವಸೂಲಾತಿ	97%	95%	–

ಸಹಕಾರದೊಂದಿಗೆ ಸಂಘವು ವರ್ಷದಿಂದ ವರ್ಷಕ್ಕೆ ಶ್ರೇಯೋಭಿವೃದ್ಧಿ ಹೊಂದುತ್ತಾ 2016–17ನೇ ಸಾಲಿಗೆ ರೂ.723.78 ಕೋಟಿ ವಹಿವಾಟು ನಡೆಸಿದ್ದು ರೂ. 3,70,87,614=87 ನಿವ್ವಳ ಲಾಭಗಳಿಸಿ ಸತತವಾಗಿ "ಎ" ತರಗತಿ ಸಂಘವೆಂದು ಗುರುತಿಸಿಕೊಂಡಿದೆ.

ಶಾಖೆಗಳು : ಈ ಸಹಕಾರಿ ಸಂಘವು 3 ಶಾಖೆಗಳನ್ನು ಹೊಂದಿದೆ. ತುಮಕೂರು ನಗರದಲ್ಲಿ ಆಡಳಿತ ಕಛೇರಿ ಶಾಖೆ, ನಗರದ ಬಸ್‌ಸ್ಟ್ಯಾಂಡ್ ಬಳಿ 2ನೇ ಶಾಖೆ ಮತ್ತು ಬೆಂಗಳೂರಿನ ಪ್ರತಿಷ್ಠಿತ ರಾಜಾಜಿನಗರ ಬಡಾವಣೆಯಲ್ಲಿ 3ನೇ ಶಾಖೆಯನ್ನು ಆರಂಭಿಸಿದೆ.

ಪ್ರಶಸ್ತಿ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಹಕಾರ ಮಹಾಮಂಡಳ ಬೆಂಗಳೂರು ಇವರು ಮಡಿಕೇರಿ ಜಿಲ್ಲೆಯ ಕುಶಾಲನಗರದಲ್ಲಿ ದಿನಾಂಕ 14.11.2014ರಂದು ನಡೆದ 61ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ಸಂದರ್ಭದಲ್ಲಿ ಈ ಸಂಘಕ್ಕೆ "2014–15ನೇ ಸಾಲಿನ ಜಿಲ್ಲೆಯ ಅತ್ಯುತ್ತಮ ಸಹಕಾರ ಪತ್ತಿನ ಸಂಘ" ಎಂದು ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

ಸೌಲಭ್ಯಗಳು : ಸಂಘದ ಸದಸ್ಯರಿಗೆ ಅವರ ಆರ್ಥಿಕ ಮಟ್ಟ ಸುಧಾರಿಸಿ ಶ್ರೇಯೋಭಿವೃದ್ಧಿ ಹೊಂದಲು ಕೆಳಕಂಡ ವಿವಿಧ ರೀತಿಯ ಸಾಲಗಳನ್ನು ಸ್ಪರ್ಧಾತ್ಮಕ ಬಡ್ಡಿದರಗಳನ್ನು ವಿಧಿಸುತ್ತಾ ಸಾಲ ನೀಡಲಾಗುತ್ತಿದೆ.

ವಾಹನ ಸಾಲ, ಗೃಹ ನಿರ್ಮಾಣ ಸಾಲ, ಯಂತ್ರೋಪಕರಣಗಳ ಮೇಲಿನ ಸಾಲ, ಕಟ್ಟಡ, ಠೇವಣಿಗಳ ಮೇಲೆ ಸಾಲ, ಚಿನ್ನಾಭರಣಗಳ ಮೇಲಿನ ಸಾಲ, ರಾಷ್ಟ್ರೀಯ ಉಳಿತಾಯ ಪತ್ರಗಳ ಮೇಲೆ ನೀಡುವ ಆಧಾರ ಸಾಲ, ಸಂಬಳದ ಮೇಲೆ ನೀಡುವ ಆಧಾರ ಸಾಲ, ಸರಕು ಅಡಮಾನ ಸಾಲ, ಸಣ್ಣ ಕೈಗಾರಿಕೆ ಹಾಗೂ ಗೃಹ ಕೈಗಾರಿಕೆಗೆ ಸ್ಥಿರಾಸ್ತಿ ಭದ್ರತೆ ಮೇಲೆ ಸಾಲ ಹೀಗೆ ವಿವಿಧ ರೀತಿಯ ಸಾಲ ಸೌಲಭ್ಯಗಳನ್ನು ಸದಸ್ಯರಿಗೆ ನೀಡಲಾಗುತ್ತಿದೆ. ಇದರಿಂದ ಅನೇಕ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಜೀವನವನ್ನು ಸಾಗಿಸಿ ಸಣ್ಣಪುಟ್ಟ ವ್ಯಾಪಾರದಲ್ಲಿ ಹಣವನ್ನು ತೊಡಗಿಸಿ ಅಭಿವೃದ್ಧಿ ಹೊಂದಲು ಅವಕಾಶವಿರುತ್ತದೆ. ಅಲ್ಲದೆ ಸಂಘದಲ್ಲಿ ಎಲ್ಲಾ ವರ್ಗದವರಿಗೂ ಸಾಲ ಸೌಲಭ್ಯವನ್ನು ನೀಡಲಾಗುತ್ತಿದೆ. ಸಂಘದ ಸದಸ್ಯರು ಇದರ ಪ್ರಯೋಜನ ಪಡೆದು ಅಭಿವೃದ್ಧಿ ಹೊಂದಿದ್ದಾರೆ.

ಸಂಘದಿಂದ ಸದಸ್ಯರಿಗೆ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ :

ವೈದ್ಯಕೀಯ ಚಿಕಿತ್ಸೆ ವೆಚ್ಚಕ್ಕಾಗಿ ರೂ.25,000/– ವರೆಗೆ ಸಹಾಯ ಧನ, ಅಪಘಾತ ವಿಮಾ ಸೌಲಭ್ಯ ರೂ.1,00,000/– ವರೆಗೆ ಸಹಾಯ ಧನ, ಮರಣೋತ್ತರ ನಿಧಿಯಿಂದ ರೂ.15,000/– ವಿತರಣೆ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರದ ಸಹಾಯ ಧನ ವಿತರಣೆ, ಬಡಮಕ್ಕಳಿಗೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸಹಾಯ ಧನ ವಿತರಣೆ, ಸದಸ್ಯರಿಗೆ ಲಾಕರ್ ಸೌಲಭ್ಯ, ನೌಕರರಿಗೆ ಹಾಗೂ ಕುಟುಂಬದವರಿಗೆ ವೈದ್ಯಕೀಯ ಚಿಕಿತ್ಸೆಗೆ ಮತ್ತು ಅಪಘಾತಕ್ಕೆ ವಿಮೆ ಸೌಲಭ್ಯ, ಎಲ್ಲಾ ಸದಸ್ಯರು ಹಾಗೂ ಗ್ರಾಹಕರುಗಳಿಗೆ ಕೋರ್ ಬ್ಯಾಂಕಿಂಗ್ ಸೌಲಭ್ಯ, ಸಂಘದ ಎಲ್ಲಾ ಶಾಖೆಗಳಲ್ಲಿ ಸದಸ್ಯರು ಇಂಟರ್ ಬ್ರಾಂಚ್ ವ್ಯವಹಾರ ನಡೆಸಲು ಅವಕಾಶ, ಎಲ್ಲಾ ಸದಸ್ಯರ ಖಾತೆಗಳ ಬಗ್ಗೆ ಎಸ್.ಎಮ್.ಎಸ್ ಸೌಲಭ್ಯ, ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ, ಮತ್ತು ಇ–ತೆರಿಗೆ ಪಾವತಿ ಸೌಲಭ್ಯ, ಸಂಘದ ಸದಸ್ಯರುಗಳಿಗೆ ಯಶಸ್ವಿನಿ ವಿಮಾ ಯೋಜನೆ ಸೌಲಭ್ಯ, ಸದಸ್ಯರು ಮತ್ತು ಗ್ರಾಹಕರಿಗೆ ಸಂಘದ ಎಲ್ಲಾ ಶಾಖೆಗಳಲ್ಲಿ ಇ–ಸ್ಟ್ಯಾಂಪ್ ಪೇಪರ್ ಸೌಲಭ್ಯವಿರುತ್ತದೆ.

ಸಂಘದ 2017–18 ಸಾಲಿನ ಯೋಜನೆಗಳು : ತುಮಕೂರು ನಗರದ ಯಲ್ಲಾಪುರದಲ್ಲಿ ಸಂಘದ 4ನೇ ಶಾಖೆಯನ್ನು ಪ್ರಾರಂಭಿಸಲು ಚಿಂತನೆ, ಬೆಂಗಳೂರು ನಗರದ ಪ್ರತಿಷ್ಠಿತ ಸ್ಥಳದಲ್ಲಿ ಶಾಖೆಯನ್ನು ಪ್ರಾರಂಭಿಸಲು ಚಿಂತನೆ, ರೂ. 200 ಕೋಟಿಗಳ ಠೇವಣಿ ಸಂಗ್ರಹಣೆ ಗುರಿ ಮತ್ತು ರೂ. 175 ಕೋಟಿಗಳವರೆಗೆ ಸಾಲ ನೀಡುವ ಗುರಿ ಹೊಂದಲಾಗಿದೆ.

ಸಂಘದಲ್ಲಿ ತರಬೇತಿ ಪಡೆದ ಹಾಗೂ ಅನುಭವವಿರುವ ನುರಿತ ಸಿಬ್ಬಂದಿಯು ನಗುಮೊಗದೊಂದಿಗೆ ಸಂಘದ ಸದಸ್ಯರಿಗೆ ಮತ್ತು ಗ್ರಾಹಕರಿಗೆಲ್ಲಾ ತ್ವರಿತವಾಗಿ ಹಾಗೂ ತೃಪ್ತಿಕರವಾಗಿ ಸೇವೆ ನೀಡುತ್ತಾ ಬಂದಿರುವುದು ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿದೆ.

ಆನ್ ಲೈನ್ ವಹಿವಾಟು ವಂಚನೆ : ನಷ್ಟ ತಪ್ಪಿಸಿಕೊಳ್ಳಲು ಗ್ರಾಹಕರು ಬ್ಯಾಂಕ್‌ಗೆ ಮಾಹಿತಿ ನೀಡಬೇಕು - ಆರ್‌ಬಿಐ

ವಂಚನೆ ವಹಿವಾಟು ಪ್ರಕರಣದಲ್ಲಿ ಬ್ಯಾಂಕಿನಿಂದ ನಿರ್ಲಕ್ಷ್ಯವಾಗಿದ್ದಲ್ಲಿ, ಇಂತಹ ವಹಿವಾಟಿನ ಬಗ್ಗೆ ಗ್ರಾಹಕರು ಬ್ಯಾಂಕಿನ ಗಮನಕ್ಕೆ ತರಲಿ ಅಥವಾ ತರದೇ ಇರಲಿ, ಆತನ ಹೊಣೆಗಾರಿಕೆ ಶೂನ್ಯ.

ನವದೆಹಲಿ : ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಸೇರಿದಂತೆ ಆನ್‌ಲೈನ್ ವಹಿವಾಟಿನಲ್ಲಿ ಹೆಚ್ಚುತ್ತಿರುವ ವಂಚನೆಗೆ ಕಡಿವಾಣ ಹಾಕಲು ಮುಂದಾಗಿರುವ ಭಾರತೀಯ ರಿಸರ್ವ್ ಬ್ಯಾಂಕ್ ವಂಚನೆಯ ವಹಿವಾಟುಗಳಲ್ಲಿ ಗ್ರಾಹಕರ ಹೊಣೆಗಾರಿಕೆಯನ್ನು ಮಿತಿಗೊಳಿಸಿ ಮಾರ್ಗದರ್ಶಿ ಸೂತ್ರಗಳನ್ನು ಪರಿಷ್ಕರಿಸಿದೆ.

ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ನಡೆಸುವ ಗ್ರಾಹಕರಿಗೆ ಬ್ಯಾಂಕುಗಳೇ ಸುರಕ್ಷತೆಯ ವ್ಯವಸ್ಥೆ ಕಲ್ಪಿಸಬೇಕು ಎಂದಿರುವ ರಿಸರ್ವ್ ಬ್ಯಾಂಕ್, ವಹಿವಾಟಿನಲ್ಲಿ ಬ್ಯಾಂಕ್‌ನಿಂದ ನಿರ್ಲಕ್ಷ್ಯವಾಗಿ ಗ್ರಾಹಕ ಅದನ್ನು ಬ್ಯಾಂಕ್ ಗಮನಕ್ಕೆ ತಂದರೂ ಅಥವಾ ತರದೇ ಇದ್ದರೂ ಆತನ ಹೊಣೆಗಾರಿಕೆ ಶೂನ್ಯ ಎಂಬ ಮಹತ್ವದ ಅಂಶಗಳು ಪರಿಷ್ಕೃತ ಸೂತ್ರಗಳಲ್ಲಿ ಸೇರ್ಪಡೆಯಾಗಿವೆ.

ಅಂತೆಯೇ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟುಗಳ ಸಲುವಾಗಿ ಕಡ್ಡಾಯವಾಗಿ ಎಸ್‌ಎಂಎಸ್ ಅಲರ್ಟ್ ಪಡೆಯಲು ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಯನ್ನು ನೋಂದಣಿ ಮಾಡಿಕೊಳ್ಳಬೇಕು ಮತ್ತು ಇಂತಹ ಗ್ರಾಹಕರಿಗೆ ಎಸ್‌ಎಂಎಸ್ ಸೌಲಭ್ಯವನ್ನು ಬ್ಯಾಂಕ್‌ಗಳು ಕಡ್ಡಾಯವಾಗಿ ಕಲ್ಪಿಸಬೇಕು. ಇ–ಮೇಲ್ ಇದ್ದಲ್ಲಿ ಅದಕ್ಕೂ ಅಲರ್ಟ್ ಸಂದೇಶ ಕಳುಹಿಸಬಹುದು ಎಂದು ಆರ್‌ಬಿಐ ತಿಳಿಸಿದೆ.

ಆರ್‌ಬಿಐ ನೂತನ ಪರಿಷ್ಕೃತ ಸೂತ್ರಗಳು

1. ಒಂದು ವೇಳೆ ಗ್ರಾಹಕನಿಗೆ ತನಗೆ ವಂಚನೆಯಾಗಿದೆ ಎಂದು ತಿಳಿದರೆ ಮೂರು ದಿನಗಳೊಳಗಾಗಿ ಸಂಬಂಧ ಪಟ್ಟ ಬ್ಯಾಂಕ್‌ಗೆ ಮಾಹಿತಿ ನೀಡಬೇಕು.
2. ಮೂರನೇ ವ್ಯಕ್ತಿಯಿಂದ ವಂಚನೆಯಾದ ಸಂದರ್ಭದಲ್ಲಿ ಬ್ಯಾಂಕ್‌ನಿಂದ ಸೂಚನೆ ಬಂದ ಬಳಿಕ ಮೂರು ದಿನಗಳ ಒಳಗಾಗಿ ಗ್ರಾಹಕ ಅದಕ್ಕೆ ಉತ್ತರಿಸದೇ ಇದ್ದರೆ (ಬ್ಯಾಂಕ್ ಅಥವಾ ಗ್ರಾಹಕನಿಂದ ನ್ಯೂನತೆ ಇಲ್ಲದೇ ಇದ್ದರು ಕೂಡ) ಅದರ ಹೊಣೆಗಾರಿಕೆ ಕೂಡ ಗ್ರಾಹಕನದ್ದೆ ಆಗಿರುತ್ತದೆ.
3. ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟು ನಡೆಸುವ ಗ್ರಾಹಕರಿಗೆ ಸುರಕ್ಷತೆಯ ವ್ಯವಸ್ಥೆಯನ್ನು ಬ್ಯಾಂಕ್‌ಗಳು ಕಲ್ಪಿಸಬೇಕು.
4. ವಂಚನೆ ವಹಿವಾಟು ಪ್ರಕರಣದಲ್ಲಿ ಬ್ಯಾಂಕಿನಿಂದ ನಿರ್ಲಕ್ಷ್ಯವಾಗಿದ್ದಲ್ಲಿ, ಇಂತಹ ವಹಿವಾಟಿನ ಬಗ್ಗೆ ಗ್ರಾಹಕರು ಬ್ಯಾಂಕಿನ ಗಮನಕ್ಕೆ ತರಲಿ ಅಥವಾ ತರದೇ ಇರಲಿ, ಆತನ ಹೊಣೆಗಾರಿಕೆ ಶೂನ್ಯ.
5. ಅನಧಿಕೃತ ವಹಿವಾಟು ನಡೆದ ಬಗ್ಗೆ ವ್ಯಕ್ತಿಯೊಬ್ಬ ಏಳು ಕೆಲಸದ ದಿನಗಳ ಒಳಗಾಗಿ ವರದಿ ಮಾಡಿದಲ್ಲಿ ಗ್ರಾಹಕನ ಹೊಣೆಗಾರಿಕೆಯನ್ನು 25,000 ರೂಪಾಯಿಗಳಿಗೆ ಮಿತಿಗೊಳಿಸಬೇಕು ಎಂದು ಆರ್‌ಬಿಐ ಹೇಳಿದೆ.

ಚಿನ್ನವನ್ನು ಕ್ಯಾಶ್ ಬ್ಯಾಕ್ ಆಗಿ ನೀಡಲಿರುವ ಪೇಟಿಎಂ

ನವದೆಹಲಿ : ತಮ್ಮ ವಹಿವಾಟಿನ ಮೇಲೆ ಕ್ಯಾಶ್ ಬ್ಯಾಕ್ ಆಗಿ ಡಿಜಿಟಲ್ ಗೋಲ್ಡ್ ಪಡೆಯುವ ಅವಕಾಶವನ್ನು ಮೊಬೈಲ್ ವಾಲೆಟ್ ಕಂಪನಿ ಪೇಟಿಎಂ ಗ್ರಾಹಕರಿಗೆ ನೀಡುತ್ತದೆ.

ಈ ವರ್ಷಾರಂಭದಲ್ಲಿ ಪೇಟಿಎಂ, ಗೋಲ್ಡ್ ರಿಫೈನರ್, ಎಂಎಂಟಿಸಿ – ಪಿಎಎಂಪಿ ಜೊತೆ ಸಹಭಾಗಿಯಾಗಿ 1 ರೂಪಾಯಿಗೆ ಚಿನ್ನ ಖರೀದಿಸುವ ಅವಕಾಶವನ್ನು ಗ್ರಾಹಕರಿಗೆ ನೀಡಿತ್ತು. ಸಹಭಾಗಿತ್ವದಡಿ ಪೇಟಿಎಂ ವಾಲೆಟ್ ಹೊಂದಿರುವವರು 24 ಕೆ, 999.9 ಪ್ಯೂರಿಟಿ ಗೋಲ್ಡ್ ಅನ್ನು ಆನ್‌ಲೈನ್ ಮೂಲಕ ಖರೀದಿಸಿ ಎಂಎಂಟಿಸಿ – ಪಾಂಪ್ಸ್‌ನ ಸೆಕ್ಯೂರ್ ವಾಲ್ಟ್ಸ್‌ನಲ್ಲಿ ಉಚಿತವಾಗಿ ಸಂಗ್ರಹಿಸಬಹುದು.

ಇಮೇಲ್ ಮೂಲಕ ಪ್ರತಿಕ್ರಿಯೆ ನೀಡಿದ ಪೇಟಿಎಂ, ಪೇಟಿಎಂ ವ್ಯಾಲೆಟ್ ಮೂಲಕ ಬಳಕೆದಾರರು ತಮ್ಮ ಕ್ಯಾಶ್ ಬ್ಯಾಕನ್ನು ಪಡೆಯಬಹುದು ಅಥವಾ ಪೇಟಿಎಂ ಗೋಲ್ಡ್ ಮೂಲಕವೂ ಪಡೆಯಬಹುದು.

ದೀರ್ಘಾವಧಿ ಉಳಿತಾಯಕ್ಕೆ ಕ್ಯಾಶ್ ಬ್ಯಾಕ್‌ನ್ನು ಪೇಟಿಎಂ ಗೋಲ್ಡ್ ಆಗಿ ಪರಿವರ್ತಿಸಲು ಗ್ರಾಹಕರು ಹೆಚ್ಚಾಗಲು ಕಳೆದ ಕೆಲ ತಿಂಗಳುಗಳಿಂದ ಟ್ರೆಂಡ್ ದಾಖಲಿಸಿದೆ ಎಂದು ಪೇಟಿಎಂ ಹೇಳಿದೆ.

ಈ ಟ್ರೆಂಡನ್ನು ಇನ್ನಷ್ಟು ಹೆಚ್ಚಿಸಲು ಕ್ಯಾಶ್ ಬ್ಯಾಕ್‌ನ್ನು ಪೇಟಿಎಂ ಗೋಲ್ಡ್ ಆಗಿ ಜಾರಿಗೆ ತರುತ್ತೇವೆ. ನೀವು ಆನ್ ಲೈನ್‌ನಲ್ಲಿ ಶಾಪಿಂಗ್ ಮಾಡಿ, ಯುಟಿಲಿಟಿ ಬಿಲ್‌ಗಳನ್ನು ಪಾವತಿಸುವುದು, ಸಿನಿಮಾ, ಪ್ರಯಾಣ ಟಿಕೆಟ್ ಖರೀದಿಸುವುದು ಇತ್ಯಾದಿಗಳನ್ನು ಮಾಡಿದರೆ ಗ್ರಾಹಕರು ಎಂಎಂಟಿಸಿ – ಪಾಂಪ್ಸ್‌ಗಳ ಸೆಕ್ಯುರ್ ಲಾಕರ್‌ನಲ್ಲಿ ಇಟ್ಟದ್ದಕ್ಕೆ ಉಚಿತವಾಗಿ ಚಿನ್ನ ಪಡೆಯಬಹುದು ಎಂದು ಪೇಟಿಎಂ ಹಿರಿಯ ಉಪಾಧ್ಯಕ್ಷ ಕೃಷ್ಣ ಹೆಗ್ಡೆ ತಿಳಿಸಿದ್ದಾರೆ.

ಸಹಕಾರ ಸಂಘಗಳಲ್ಲಿ ಸಭೆಗಳನ್ನು ನಡೆಸುವ ವಿಧಿ–ವಿಧಾನಗಳು

▶▶ ಮಹದೇವಪ್ಪ ಬಿ.ಎ., ಶಿವಮೊಗ್ಗ

ಸಹಕಾರ ಸಂಘಗಳು ಕಾನೂನುಬದ್ಧವಾಗಿ ನಡೆಸಬೇಕಾದ ಪ್ರಮುಖ ಸಭೆಗಳು :

1. ವಾರ್ಷಿಕ ಸಾಮಾನ್ಯ ಸಭೆ (ಕರ್ನಾಟಕ ಸಹಕಾರ ಕಾಯಿದೆ ಕಲಂ. 27 ಮತ್ತು ನಿಯಮ 14–ಎಜೆ)
2. ವಿಶೇಷ ಮಹಾಸಭೆ (ಕರ್ನಾಟಕ ಸಹಕಾರ ಕಾಯಿದೆ ಕಲಂ. 28 ಮತ್ತು ನಿಯಮ 14–ಎಜೆ)
3. ಆಡಳಿತ ಮಂಡಳಿ ಸಭೆ (ಕರ್ನಾಟಕ ಸಹಕಾರ ಕಾಯಿದೆ ಕಲಂ. 28 (ಸಿ) ಮತ್ತು ನಿಯಮ 14–ಎಕೆ)

ಸಾಮಾನ್ಯ ಸಭೆಯೂ ಸೇರಿದಂತೆ ಸಹಕಾರ ಸಂಘಗಳ ಎಲ್ಲ ಸಭೆಗಳನ್ನು ನೋಂದಾಯಿತ ಕಛೇರಿಯಲ್ಲಿ ನಡೆಸತಕ್ಕದ್ದು. ಅಂಥ ಯಾವುದೇ ಸಭೆಯನ್ನು ನೋಂದಾಯಿತ ಕಛೇರಿಯಲ್ಲಿ ನಡೆಸಲು ಸಾಕಷ್ಟು ಸ್ಥಳಾವಕಾಶ ಇಲ್ಲದಿದ್ದರೆ, ನೋಂದಾಯಿತ ಕಛೇರಿಯು ಇರುವ ನಗರ, ಪಟ್ಟಣ ಅಥವಾ ಹಳ್ಳಿಯ ಒಳಗೆ ಇತರ ಯಾವುದೇ ಸ್ಥಳದಲ್ಲಿ ನಡೆಸಬಹುದು.

ವಾರ್ಷಿಕ ಸಾಮಾನ್ಯ ಸಭೆ : ಪ್ರತಿಯೊಂದು ಸಂಘವು ವರ್ಷಕ್ಕೊಮ್ಮೆ ಸೆಪ್ಟಂಬರ್ ತಿಂಗಳ 25ನೇ ದಿನದೊಳಗೆ ತನ್ನ ಸದಸ್ಯರ ಸಾಮಾನ್ಯ ಸಭೆಯನ್ನು ನಡೆಸತಕ್ಕದ್ದು. ಈ ಸಭೆಯನ್ನು ಕರೆಯಲು ಸಕಾರಣವಿಲ್ಲದೆ ತಪ್ಪಿದರೆ, ಸಂಬಂಧಿಸಿದ ಪದಾಧಿಕಾರಿ ಅಥವಾ ಮಂಡಳಿಯ ನಿರ್ದೇಶಕರು 5 ವರ್ಷಗಳಿಗೆ ಮೀರದ ಅವಧಿಯವರೆಗೆ ಮಂಡಲಿಯ ಪದಾಧಿಕಾರಿಯಾಗಿರಲು ಅಥವಾ ಸದಸ್ಯರಾಗಿರಲು ಅಥವಾ ಹಾಗೆ ಚುನಾಯಿತರಾಗಲು ಅನರ್ಹತೆ ಉಂಟಾಗುತ್ತದೆ. ಸಹಕಾರ ಸಂಘದ ಆಡಳಿತ ಮಂಡಳಿಯು ಸಾಮಾನ್ಯ ಸಭೆಯ ದಿನಾಂಕ ಮತ್ತು ಸಮಯವನ್ನು ನಿರ್ಧರಿಸತಕ್ಕದ್ದು. ಅದರಂತೆ ಮುಖ್ಯ ಕಾರ್ಯನಿರ್ವಾಹಕರು ಕನಿಷ್ಠ 15 ಸ್ಪಷ್ಟ ದಿನಗಳ ನೋಟೀಸನ್ನು ನೀಡತಕ್ಕದ್ದು. ಆದಾಗ್ಯೂ ತುರ್ತು ಸಂದರ್ಭಗಳಲ್ಲಿ ಕನಿಷ್ಠ ಪಕ್ಷ 10 ಸ್ಪಷ್ಟ ದಿನಗಳ ನೋಟೀಸ್ ನೀಡುವುದರ ಮೂಲಕ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು. ಸಭಾ ನೋಟೀಸನ್ನು... ಸಾಮಾನ್ಯ ಅಂಚೆ; ಅಥವಾ By bulk post ಅಥವಾ ಕೊರಿಯರ್ ಅಥವಾ ವಿದ್ಯುಜ್ಜನ್ಯ ಅಂಚೆ (ಇ–mail); ಅಥವಾ ಸೂಕ್ತ ಸ್ವೀಕೃತಿಯ ಸಹಿತ ಸ್ಥಳೀಯ ರವಾನೆ ಮತ್ತು ಕಾರ್ಯಕ್ಷೇತ್ರದಲ್ಲಿ ಸಾಕಷ್ಟು ಪರಿಚಲನೆಯಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಣೆ ನೀಡತಕ್ಕದ್ದು.

ನೋಟೀಸಿನಲ್ಲಿರಬೇಕಾದ ಪ್ರಮುಖ ಅಂಶಗಳು : ಸ್ಥಳ, ದಿನಾಂಕ, ಸಮಯ ಮತ್ತು ಅಜೆಂಡಾಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕರ ಸಹಿ ಇರತಕ್ಕದ್ದು. ಕಲಂ 27 ರಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಅನುಗುಣವಾಗಿ ಅಜೆಂಡಾಗಳನ್ನು ಸಿದ್ಧಪಡಿಸಿ, ಪ್ರತಿ ವಿಷಯದ ಮೇಲೆ ಸಂಕ್ಷಿಪ್ತ ಟಿಪ್ಪಣಿಯನ್ನು ನೋಟೀಸಿನ ಜೊತೆ ಕಳುಹಿಸತಕ್ಕದ್ದು. ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿ, ಆಸ್ತಿ ಜವಾಬ್ದಾರಿ ತಃಖ್ತೆ, ಲಾಭ–ನಷ್ಟಗಳ ತಃಖ್ತೆ ಮತ್ತು ಆಡಳಿತ ಮಂಡಳಿಯು ತೆಗೆದುಕೊಂಡ ಕ್ರಮಗಳ ಬಗ್ಗೆ ನೋಟೀಸಿನಲ್ಲಿ ಮಾಹಿತಿ ನೀಡುವುದು ಹಾಗೂ ಸಾಮಾನ್ಯ ಸಭೆಯಲ್ಲಿ ವಿವರಗಳನ್ನು ಮಂಡಿಸುವುದು ಅಗತ್ಯವಿರುತ್ತದೆ. ಬೈಲಾ ತಿದ್ದುಪಡಿಯ ಪ್ರಸ್ತಾಪವಿದ್ದಲ್ಲಿ... ತಿದ್ದುಪಡಿಯ ವಿವರಗಳು ಇರತಕ್ಕದ್ದು. ಯಾವುದೇ ಕಾರಣಕ್ಕಾಗಿ ಸಂಘದ ಅಧ್ಯಕ್ಷರು ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಆ ಸಂಘದ ಉಪಾಧ್ಯಕ್ಷರು ಅಥವಾ ಅವರ ಗೈರುಹಾಜರಿಯಿದ್ದಲ್ಲಿ, ಸಭೆಯಲ್ಲಿ ಹಾಜರಿರುವ ನಿರ್ದೇಶಕರಿಂದ ಚುನಾಯಿತರಾದ ಆಡಳಿತ ಮಂಡಳಿಯ ಇತರ ಸದಸ್ಯ ಅಂತಹ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಆಡಿಟ್ ವರದಿ ಒಂದು ಸಹಕಾರ ಸಂಸ್ಥೆಯ SWOT ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ. ಆ ವರದಿಯನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸುವುದು, ಸಂಸ್ಥೆಯು ಪಾರದರ್ಶಕ ಆಡಳಿತದಿಂದ ಕೂಡಿದೆ ಎಂಬುದರ ಸಂಕೇತ.

ಪರಿಶೋಧಿತ ಲೆಕ್ಕಗಳನ್ನು ವರದಿಯ ಸಹಿತ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಲು ತಪ್ಪಿದ ಮಂಡಲಿಯ ಸದಸ್ಯರು, ಹಾಗೂ ಮುಖ್ಯ ಕಾರ್ಯನಿರ್ವಾಹಕರು 6 ತಿಂಗಳವರೆಗೆ ಕಾರಾವಾಸ ಅಥವಾ 10000ಗಳವರೆಗೆ ಜುಲ್ಮಾನೆ ಅಥವಾ ಎರಡರಿಂದಲೂ ದಂಡನೀಯವೆಂದು ಕಲಂ 109ರಲ್ಲಿ ಸ್ಪಷ್ಟಪಡಿಸಲಾಗಿದೆ.

ಕೋರಂ : ಸಾಮಾನ್ಯ ನಿಕಾಯದ ಮತದಾನದ ಹಕ್ಕುಳ್ಳ ಒಟ್ಟು ಸದಸ್ಯರ ಶೇ. 10 ಅಥವಾ 1 ಸಾವಿರ ಯಾವುದು ಕಡಿಮೆಯೋ ಅಷ್ಟು ಸದಸ್ಯರ ಹಾಜರಾತಿಯು ಸಾಮಾನ್ಯ ಸಭೆಯ ಕೋರಂ ಆಗಿರತಕ್ಕದ್ದು. ಸಭೆಗೆ ಗೊತ್ತುಪಡಿಸಿದ ಸಮಯದಿಂದ 1 ಗಂಟೆಯೊಳಗೆ ಕೋರಂ ಇಲ್ಲದ ಪಕ್ಷದಲ್ಲಿ ಅಂಥಾ ಸಭೆಯನ್ನು ಸಭಾಧ್ಯಕ್ಷರು ಮುಂದೂಡಬೇಕು. ಸದಸ್ಯರುಗಳ ಕೋರಿಕೆ ಮೇರೆಗೆ ಸಭೆಯನ್ನು ಕರೆದಿದ್ದರೆ ಆ ಸಭೆಯನ್ನು ವಿಸರ್ಜಿಸಬೇಕು. ಸಭೆಯ ಕಲಾಪವನ್ನು ನಡೆಸುತ್ತಿರುವಾಗ... ಯಾವುದೇ ಸಂದರ್ಭದಲ್ಲಿ ಕೋರಂ ಇಲ್ಲದಿದ್ದಲ್ಲಿ ಸಭಾಧ್ಯಕ್ಷರು ಅಂತಹ ಸಭೆಯನ್ನು ಮುಂದೂಡತಕ್ಕದ್ದು. ಮುಂದುವರೆದ ಸಭೆಯು ಅದೇ ದಿನಾಂಕದಂದು ಅಥವಾ ಮುಂದೂಡಿದ ದಿನಾಂಕದಿಂದ 7 ದಿನಗಳೊಳಗೆ ಸಭೆಯ ಅಧ್ಯಕ್ಷರು ಗೊತ್ತುಪಡಿಸಿದ ಅಂತಹ ಸ್ಥಳಗಳಲ್ಲಿ, ಅಂತಹ ದಿನಾಂಕ ಮತ್ತು ಸಮಯದಲ್ಲಿ ನಡೆಯತಕ್ಕದ್ದು. ಅಂತಹ ಮುಂದುವರೆದ ಸಭೆಯಲ್ಲಿ ಮುಂದೂಡಲ್ಪಟ್ಟ ಸಭೆಯ ಅಜೆಂಡಾದಲ್ಲಿ ನಮೂದಿಸಿರುವ ವಿಷಯಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಿಷಯಗಳನ್ನು ಚರ್ಚಿಸತಕ್ಕದ್ದಲ್ಲ ಮತ್ತು ನಿರ್ಣಯ ತೆಗೆದುಕೊಳ್ಳತಕ್ಕದ್ದಲ್ಲ. ಈ ಸಭೆಗೂ ಅಗತ್ಯವಾದ ಕೋರಂ ಇರತಕ್ಕದ್ದು.

ವಾರ್ಷಿಕ ಸಾಮಾನ್ಯ ಸಭೆಯು ವರ್ಷಕ್ಕೊಮ್ಮೆ ನಡೆಯುವ ಸಭೆಯಾಗಿದ್ದು, ಇದು ಸದಸ್ಯರಿಗಾಗಿಯೇ ನಡೆಸುವ ಕಾನೂನುಬದ್ಧ ಸಭೆ. ಸಂಘದ ಎಲ್ಲ ಸದಸ್ಯರು ಸಕ್ರಿಯವಾಗಿ ಭಾಗವಹಿಸುವುದಾದರೆ ಆ ಸಭೆಯು ಅರ್ಥಪೂರ್ಣವಾಗಿ ಮೂಡಿಬರುತ್ತದೆ. ಕಲಂ 27 (ಎ) ರೀತ್ಯಾ ಸಂಘದ ಯಾವುದೇ ಸದಸ್ಯನು ಹಿಂದಿನ 5 ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗಲು ತಪ್ಪಿದರೆ, ಅವನು 3 ವರ್ಷಗಳ ಅವಧಿಯವರೆಗೆ ಮತ ನೀಡುವ ಹಕ್ಕನ್ನು ಕಳೆದುಕೊಳ್ಳುತ್ತಾನೆ.

ತೀರ್ಮಾನಗಳು : ಸಾಮಾನ್ಯ ಸಭೆಯಲ್ಲಿ ಎಲ್ಲ ತೀರ್ಮಾನಗಳನ್ನು ಹಾಜರಿರುವ ಸದಸ್ಯರ ಸರಳ ಬಹುಮತದಿಂದ ತೆಗೆದುಕೊಳ್ಳತಕ್ಕದ್ದು. ಚುನಾವಣೆಯನ್ನು ಹೊರತುಪಡಿಸಿ ಯಾವುದೇ ವಿಷಯದ ಮೇಲೆ ತೀರ್ಮಾನದ ಪರ ಅಥವಾ ವಿರುದ್ಧ ಸಮಾನ ಮತಗಳು ದೊರೆತರೆ ಸಭಾಧ್ಯಕ್ಷರು ಎರಡನೆಯ ಅಥವಾ ನಿರ್ಣಾಯಕ ಮತ ಚಲಾಯಿಸತಕ್ಕದ್ದು.

ನಿರ್ಣಯಗಳನ್ನು ರೆಕಾರ್ಡ್ ಮಾಡುವುದು : ನಡವಳಿ ಪುಸ್ತಕದಲ್ಲಿ ಸಭೆ ನಡೆದ ದಿನಾಂಕ, ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳ ಹೆಸರನ್ನು ನಮೂದಿಸಬೇಕು. ಮುಖ್ಯ ಕಾರ್ಯನಿರ್ವಾಹಕರು ಸಭೆಯ ನಡವಳಿಕೆಗಳನ್ನು ಚರ್ಚೆಗಳಿಗನುಸಾರ ನಿಖರವಾಗಿ, ಅದೇ ಉದ್ದೇಶಕ್ಕಾಗಿ ಇಡಲ್ಪಟ್ಟ ಮತ್ತು ಅದರ ಪುಟಗಳನ್ನು ಅನುಕ್ರಮವಾಗಿ ಸಂಖ್ಯೀಕರಿಸಿದ ಪುಸ್ತಕದಲ್ಲಿ ದಾಖಲಿಸತಕ್ಕದ್ದು. ಯಾವುದೇ ಸದಸ್ಯನು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿದಾಗ, ಅದನ್ನು ನಡವಳಿಕೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರು ಸ್ಪಷ್ಟವಾಗಿ ದಾಖಲಿಸತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಭಾಧ್ಯಕ್ಷರು ಸಹಿ ಮಾಡತಕ್ಕದ್ದು. ನಡವಳಿ ಪುಸ್ತಕವು ಮುಖ್ಯ ಕಾರ್ಯನಿರ್ವಾಹಕರ ಸುಪರ್ದಿನಲ್ಲಿರಬೇಕು. ಸಾಮಾನ್ಯ ಸಭೆಯು ನಡೆದ ದಿನಾಂಕದಿಂದ 30 ದಿನಗಳ ಒಳಗೆ ಸಭಾ ನಡವಳಿಗಳ ಪ್ರತಿಯನ್ನು ರಿಜಿಸ್ಟ್ರಾರಿಗೆ, ಹಣಕಾಸು ಬ್ಯಾಂಕಿಗೆ ಕಳುಹಿಸತಕ್ಕದ್ದು ಮತ್ತು ಸಹಕಾರ ಸಂಘದ ಸೂಚನಾ ಫಲಕದಲ್ಲಿ ದೃಢೀಕೃತ ಪ್ರತಿಯನ್ನು ಪ್ರಕಟಿಸತಕ್ಕದ್ದು. ಸಭೆಯ ನಡವಳಿಗಳ ಪುಸ್ತಕವನ್ನು ಸಂಘದ ಕಚೇರಿಯಲ್ಲಿ ಇಡತಕ್ಕದ್ದು. ಕೆಲಸದ ವೇಳೆಯಲ್ಲಿ ಸದಸ್ಯರು ಪರಿಶೀಲಿಸಲು ಅವಕಾಶ ಇರತಕ್ಕದ್ದು. ಸದಸ್ಯರು ನಡವಳಿಗಳ ಪ್ರತಿ ಇಚ್ಛಿಸಿದಾಗ ಒದಗಿಸತಕ್ಕದ್ದು.

ವಿಶೇಷ ಸಾಮಾನ್ಯ ಸಭೆ : ಆಡಳಿತ ಮಂಡಳಿಯು ಯಾವುದೇ ಸಮಯದಲ್ಲಿ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು. ನಿಬಂಧಕರು ಅಥವಾ ಒಟ್ಟು ಸದಸ್ಯರ ಸಂಖ್ಯೆಯ 1/5 ರಷ್ಟು ಸದಸ್ಯರಿಂದ ಲಿಖಿತ ಕೋರಿಕೆ ಬಂದ 1 ತಿಂಗಳೊಳಗೆ ಕರೆಯತಕ್ಕದ್ದು. ಕೋರಿಕೆಗೆ ಅನುಸಾರವಾಗಿ ವಿಶೇಷ ಸಾಮಾನ್ಯ ಸಭೆಯನ್ನು ಕರೆಯದಿದ್ದರೆ ರಿಜಿಸ್ಟ್ರಾರ್ ಅಥವಾ ಅಧಿಕೃತ ವ್ಯಕ್ತಿ ಸಭೆಯನ್ನು ಕರೆಯಲು ಅಧಿಕಾರ ಹೊಂದಿರುತ್ತಾರೆ. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಡೆಸಬಹುದಾದ ಎಲ್ಲ ಕಲಾಪಗಳನ್ನು ಮತ್ತು ವಿಶೇಷವಾಗಿ ನಮೂದಿಸಿದ ಕಲಾಪಗಳನ್ನು ನಡೆಸಲು ಅಧಿಕಾರವಿರುತ್ತದೆ. ಕೋರಿಕೆಯಂತೆ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಲು ತಪ್ಪಿದ ಪದಾಧಿಕಾರಿಗಳನ್ನು, ನಿರ್ದೇಶಕರನ್ನು 5 ವರ್ಷಗಳವರೆಗೆ ಅನರ್ಹತೆ ಮಾಡಲಾಗುತ್ತದೆ ಹಾಗೂ ಪ್ರತಿಯೊಬ್ಬ ಪದಾಧಿಕಾರಿ ಅಥವಾ ಮಂಡಲಿ ಸದಸ್ಯನು 300 ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗುತ್ತಾನೆಂದು ಕಲಂ. 109(5)ರಲ್ಲಿ ಸ್ಪಷ್ಟಪಡಿಸಲಾಗಿದೆ.

ಆಡಳಿತ ಮಂಡಳಿ ಸಭೆ : ಉಪವಿಧಿಗಳಲ್ಲಿ ನಮೂದಿಸಿರುವ ಕಲಾಪಗಳನ್ನು ನಿರ್ವಹಿಸಲು ಅಗತ್ಯವಿದ್ದಾಗ ಮಂಡಳಿ ಸಭೆಯನ್ನು ನಡೆಸಬಹುದು. ಆಡಳಿತ ಮಂಡಲಿಯ 2 ನಿರಂತರ ಸಭೆಗಳ ಮಧ್ಯದ ಅಂತರವು 3 ತಿಂಗಳನ್ನು ಮೀರತಕ್ಕದ್ದಲ್ಲ. ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಮುಖ್ಯ ಕಾರ್ಯನಿರ್ವಾಹಕರು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಕನಿಷ್ಠ 7 ಸ್ಪಷ್ಟ ದಿನಗಳ ನೋಟೀಸನ್ನು ತ್ವರಿತ ಅಂಚೆ; ಅಥವಾ ಕೊರಿಯರ್; ಅಥವಾ ಸೂಕ್ತ ಸ್ವೀಕೃತಿಯ ಸಹಿತ ಸ್ಥಳೀಯ ರವಾನೆ ಮೂಲಕ ನೀಡತಕ್ಕದ್ದು. ತುರ್ತು ಸಂದರ್ಭಗಳಲ್ಲಿ ಕನಿಷ್ಠ ಪಕ್ಷ 3 ಸ್ಪಷ್ಟ ದಿನಗಳ ನೋಟೀಸ್ ನೀಡತಕ್ಕದ್ದು.

ನೋಟೀಸಿನಲ್ಲಿರಬೇಕಾದ ಅಂಶಗಳು : ಕಲಂ 28(ಸಿ) ಅನ್ವಯ ಆಡಳಿತ ಮಂಡಳಿಗೆ ದತ್ತವಾಗಿರುವ ಅಧಿಕಾರಗಳು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ವಿಷಯಗಳನ್ನು ನೋಟೀಸಿನಲ್ಲಿ ಅಜೆಂಡಾವಾರು ನಮೂದಿಸಿರತಕ್ಕದ್ದು. ಸಭೆ ನಡೆಯುವ ಸ್ಥಳ, ದಿನಾಂಕ, ಸಮಯ ಮತ್ತು ಅಜೆಂಡಾಗಳು ಸ್ಪಷ್ಟವಾಗಿರಬೇಕು. ಪ್ರತಿ ಅಜೆಂಡಾ ಬಗ್ಗೆ ಅದರ ಸಾಧಕ – ಬಾಧಕ, ಅನ್ವಯವಾಗುವ ಕಾನೂನಿನ ಉಪಬಂಧ, ಆರ್ಥಿಕ ಪರಿಣಾಮಗಳನ್ನೊಳಗೊಂಡ ವಿವರವಾದ ಟಿಪ್ಪಣಿಯನ್ನು ನೋಟೀಸಿನ ಜೊತೆ ಕಳಿಸಬೇಕು. ಯಾವುದೇ ಕಾರಣಕ್ಕಾಗಿ ಸಂಘದ ಅಧ್ಯಕ್ಷರು ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಆ ಸಂಘದ ಉಪಾಧ್ಯಕ್ಷರು ಅಥವಾ ಅವರ ಗೈರುಹಾಜರಿಯಿದ್ದಲ್ಲಿ, ಸಭೆಯಲ್ಲಿ ಹಾಜರಿರುವ ನಿರ್ದೇಶಕರಿಂದ ಚುನಾಯಿತರಾದ ಆಡಳಿತ ಮಂಡಳಿಯ ಇತರ ಸದಸ್ಯ ಅಂತಹ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

ಕೋರಂ : ಆಡಳಿತ ಮಂಡಲಿಯ ಬಲದ ಶೇ.50ರ ನಂತರದ ಪೂರ್ಣ ಸಂಖ್ಯೆ ಕೋರಂ ಆಗಿರತಕ್ಕದ್ದು. ಸಭೆಯಲ್ಲಿ ಯಾವುದೇ ಕಲಾಪಗಳ ನಿರ್ವಹಣೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಕಲಾಪವನ್ನು ನಿರ್ವಹಿಸತಕ್ಕದ್ದಲ್ಲ. ವೃತ್ತಿಪರ ನಿರ್ದೇಶಕರು, ಕಾರ್ಯಾನುಗುಣ ನಿರ್ದೇಶಕರು ಮಂಡಲಿಯ ಸಭೆಗಳನ್ನು ನಡೆಸಲು ಕೋರಂನ ಭಾಗವಾಗಿರತಕ್ಕದ್ದಲ್ಲ. ಸಭೆಗೆ ಗೊತ್ತುಪಡಿಸಿದ ಸಮಯದಿಂದ 1 ಗಂಟೆಯೊಳಗೆ ಕೋರಂ ಇಲ್ಲದಿದ್ದ ಪಕ್ಷದಲ್ಲಿ ಸಭೆಯನ್ನು ಮುಂದೂಡಬೇಕು. ನಿರ್ದೇಶಕರುಗಳ ಕೋರಿಕೆಯ ಮೇರೆಗೆ ಕರೆದಿದ್ದರೆ... ಕೋರಂ ಇಲ್ಲದಿದ್ದಾಗ ಸಭೆಯನ್ನು ವಿಸರ್ಜಿಸತಕ್ಕದ್ದು.

ಮುಂದೂಡಿದ ಸಭೆ : ಮುಂದುವರೆದ ಸಭೆಯು ಅದೇ ದಿನಾಂಕದಂದು ಅಥವಾ ಮುಂದೂಡಿದ ದಿನಾಂಕದಿಂದ 7 ದಿನಗಳೊಳಗೆ ನಡೆಯತಕ್ಕದ್ದು. ಮುಂದೂಡಲ್ಪಟ್ಟ ಸಭೆಯಲ್ಲಿ ಬಾಕಿ ಉಳಿದಿದ್ದ ವಿಷಯಗಳನ್ನು... ಮುಂದುವರೆದ ಸಭೆಯಲ್ಲಿ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕು. ಈ ಸಭೆಗೂ ಅಗತ್ಯವಾದ ಕೋರಂ ಇರತಕ್ಕದ್ದು. ಕೋರಂ ಉಳ್ಳ... ಮುಂದುವರೆದ ಅಥವಾ ಯಾವುದೇ ತರುವಾಯದ ಸಭೆಯಲ್ಲಿ ಬಾಕಿ ಇರುವ ವಿಷಯಗಳನ್ನು ಮಾತ್ರ ಇತ್ಯರ್ಥಗೊಳಿಸತಕ್ಕದ್ದು. ಅನುಮತಿ ಪಡೆಯದೇ ಸಂಘದ ಮಂಡಲಿಯ ಮೂರು ನಿರಂತರ ಸಭೆಗಳಿಗೆ ಯಾವುದೇ ನಿರ್ದೇಶಕರು ಗೈರುಹಾಜರಾದರೆ... ಅವರು ಸಹಕಾರ ಸಂಘದ ಆಡಳಿತ ಮಂಡಲಿಯ ಸದಸ್ಯರಾಗಿ ಚುನಾಯಿತರಾಗಲು ಅಥವಾ ನೇಮಕಗೊಳ್ಳಲು ಅಥವಾ ಮುಂದುವರೆಯಲು 5 ವರ್ಷಗಳ ಅವಧಿಯವರೆಗೆ ಅನರ್ಹನಾಗತಕ್ಕದ್ದು. ಅನರ್ಹತೆ, ರಾಜೀನಾಮೆ ಅಥವಾ ಮರಣ ಅಥವಾ ತೆಗೆದುಹಾಕುವಿಕೆಯಿಂದ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂ ಆಗಲು ಅಗತ್ಯವಿರುವ ಸಂಖ್ಯೆಗಿಂತ ಕಡಿಮೆ ಇದ್ದಲ್ಲಿ ಆರು ತಿಂಗಳವರೆಗೆ ವಿಶೇಷ ಅಧಿಕಾರಿಯನ್ನು ನೇಮಕ ಮಾಡಬಹುದು.

ಸಭೆಯ ಕಾರ್ಯಕಲಾಪಗಳು : ಅಜೆಂಡಾದ ವಿಷಯಗಳನ್ನು ಮಾತ್ರ ಚರ್ಚೆಗೆ ತೆಗೆದುಕೊಳ್ಳತಕ್ಕದ್ದು. ಬೇರೆ ವಿಷಯದ ಮೇಲೆ ತೀರ್ಮಾನ ತೆಗೆದುಕೊಳ್ಳಲು ಸಾಕಷ್ಟು ಸಮಯವಿಲ್ಲದಿದ್ದಲ್ಲಿ, ನಿರ್ದೇಶಕರಿಗೆ ಆ ವಿಷಯದ ಬಗ್ಗೆ ಟಿಪ್ಪಣಿ ಒದಗಿಸಬೇಕು. ಅಜೆಂಡಾದ ವಿಷಯಗಳು ಮುಗಿದ ನಂತರ ಅಧ್ಯಕ್ಷರ ಅನುಮತಿಯ ಮೇರೆಗೆ ಹೆಚ್ಚುವರಿ ವಿಷಯವನ್ನಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಬಹುದು. ನಿರ್ದೇಶಕರುಗಳ ಚುನಾವಣೆ, ಪದಾಧಿಕಾರಿಗಳ ಚುನಾವಣೆ, ಕೋ–ಆಪ್ಷನ್, ನೌಕರರ ವಿರುದ್ಧ ಶಿಕ್ಷೆಯನ್ನು ವಿಧಿಸುವಿಕೆ ಆರ್ಥಿಕ ಪರಿಣಾಮಗಳನ್ನೊಳಗೊಂಡ ಯಾವುದೇ ವಿಷಯಗಳನ್ನು ಹೆಚ್ಚುವರಿ ವಿಷಯವನ್ನಾಗಿ ತೆಗೆದುಕೊಳ್ಳಲು ಬರುವುದಿಲ್ಲ ಹಾಗೂ ಸೂಕ್ತ ಟಿಪ್ಪಣಿ ನೀಡದೆ... ಯಾವುದೇ ಹೆಚ್ಚುವರಿ ವಿಷಯವನ್ನು ಮಂಡಿಸತಕ್ಕದ್ದಲ್ಲ.

ತೀರ್ಮಾನಗಳು : ಸಭೆಯಲ್ಲಿ ಎಲ್ಲ ತೀರ್ಮಾನಗಳನ್ನು ಹಾಜರಿರುವ ನಿರ್ದೇಶಕರ ಸರಳ ಬಹುಮತದಿಂದ ತೆಗೆದುಕೊಳ್ಳತಕ್ಕದ್ದು. ಚುನಾವಣೆಯನ್ನು ಹೊರತುಪಡಿಸಿ ಯಾವುದೇ ವಿಷಯದ ಮೇಲೆ

ತೀರ್ಮಾನದ ಪರ ಅಥವಾ ವಿರುದ್ಧ ಸಮಾನ ಮತಗಳು ದೊರೆತರೆ ಸಭಾಧ್ಯಕ್ಷರು ಎರಡನೆಯ ಅಥವಾ ನಿರ್ಣಾಯಕ ಮತ ಚಲಾಯಿಸತಕ್ಕದ್ದು. ಸಭೆ ನಡೆಯುವಾಗ ನಿರ್ದೇಶಕರು ಯಾವುದೇ ವಿಷಯದ ಬಗ್ಗೆ ಮಾತನಾಡಬೇಕಾದಾಗ, ಸಭಾಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಬೇಕು. ಸಭಾ ತಿಳುವಳಿಕೆ ಪತ್ರದಲ್ಲಿರುವ ಅಜೆಂಡಾಗಳ ಬಗ್ಗೆ ಮಾಹಿತಿ ಹೊಂದಿರಬೇಕು. ಚರ್ಚೆ ವಿಷಯಾಧಾರಿತವಾಗಿರಬೇಕೇ ಹೊರತು ವ್ಯಕ್ತಿಗತವಾಗಿರಬಾರದು. ಅಪಮಾನಕರ ಭಾಷೆಯನ್ನು ಉಪಯೋಗಿಸಬಾರದು. ಮಾತನಾಡುವ ಹಕ್ಕನ್ನು ಸಂಸ್ಥೆಯ ಹಿತಕ್ಕೆ ಧಕ್ಕೆಯಾಗುವಂತೆ ಉಪಯೋಗಿಸಬಾರದು. ಸಭಾಧ್ಯಕ್ಷರು ಒಂದು ವಿಷಯದ ಬಗ್ಗೆ ಅಂತಿಮ ತೀರ್ಮಾನ (ರೂಲಿಂಗ್) ನೀಡಿದ ನಂತರ ಅದೇ ವಿಷಯದ ಬಗ್ಗೆ ಮತ್ತೆ ಮಾತನಾಡಬಾರದು. ನ್ಯಾಯಾಲಯದಲ್ಲಿರುವ ವಿಷಯದ ಬಗ್ಗೆ ಯಾವುದೇ ಅಂತಿಮ ಅಭಿಪ್ರಾಯ ನೀಡಬಾರದು.

ನಿರ್ಣಯಗಳನ್ನು ರೆಕಾರ್ಡ್ ಮಾಡುವುದು :

- ಸಭೆಯಲ್ಲಿ ಭಾಗವಹಿಸುತ್ತಿರುವ ಎಲ್ಲ ನಿರ್ದೇಶಕರು ಸಭೆಯು ಪ್ರಾರಂಭವಾಗುವ ಮುನ್ನ ಸಭಾ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕರು ಸಭೆಯ ನಡವಳಿಕೆಗಳನ್ನು ಚರ್ಚೆಗಳಿಗನುಸಾರ ನಿಖರವಾಗಿ, ಅದೇ ಉದ್ದೇಶಕ್ಕಾಗಿ ಇಡಲ್ಪಟ್ಟ ಮತ್ತು ಅದರ ಪುಟಗಳನ್ನು ಅನುಕ್ರಮವಾಗಿ ಸಂಖ್ಯೀಕರಿಸಿದ ಪುಸ್ತಕದಲ್ಲಿ ದಾಖಲಿಸತಕ್ಕದ್ದು. ನಡವಳಿಕೆಯ ಪುಸ್ತಕದಲ್ಲಿ ದಾಖಲಿಸತಕ್ಕದ್ದು. ಯಾವುದೇ ನಿರ್ದೇಶಕನು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿದಾಗ, ಅದನ್ನು ನಡವಳಿಕೆಯಲ್ಲಿ ಸ್ಪಷ್ಟವಾಗಿ ದಾಖಲಿಸತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಭಾಧ್ಯಕ್ಷರು ಸಹಿ ಮಾಡತಕ್ಕದ್ದು. ನಡವಳಿ ಪುಸ್ತಕವು ಮುಖ್ಯ ಕಾರ್ಯನಿರ್ವಾಹಕರ ಸುಪರ್ದಿನಲ್ಲಿರಬೇಕು.
- ಸಭೆಯು ನಡೆದ ದಿನದಿಂದ 7 ದಿನಗಳ ಒಳಗೆ ಸಭೆಯ ನಡವಳಿಗಳನ್ನು ಎಲ್ಲಾ ನಿರ್ದೇಶಕರುಗಳಿಗೆ ಕಳುಹಿಸತಕ್ಕದ್ದು. ತೀರ್ಮಾನವನ್ನು ಸರಿಯಾಗಿ ದಾಖಲಿಸಿಲ್ಲ ಅಥವಾ ವಿಷಯವನ್ನು ಸಭೆಯಲ್ಲಿ ಚರ್ಚಿಸಿಲ್ಲ ಎಂದು ಯಾವುದೇ ನಿರ್ದೇಶಕನ ಆಕ್ಷೇಪಣೆ ಇದ್ದಲ್ಲಿ, ನಡವಳಿಗಳನ್ನು ಸ್ವೀಕರಿಸಿದ ದಿನಾಂಕದಿಂದ 3 ದಿನಗಳ ಒಳಗೆ ಅವರ ಅಭಿಪ್ರಾಯವನ್ನು ತಿಳಿಸತಕ್ಕದ್ದು. ಯಾವುದೇ ತೀರ್ಮಾನದ ಮೇಲೆ ಬಹುಸಂಖ್ಯಾ ನಿರ್ದೇಶಕರ ಆಕ್ಷೇಪಣೆ ಇದ್ದಲ್ಲಿ ಮುಖ್ಯ ಕಾರ್ಯನಿರ್ವಾಹಕರು ಆ ತೀರ್ಮಾನವನ್ನು ಜಾರಿಗೊಳಿಸದೆ ತರುವಾಯದ ಮಂಡಲಿ ಸಭೆಗೆ ಇಡತಕ್ಕದ್ದು.
- ಕಾಯಿದೆ, ನಿಯಮ ಮತ್ತು ಉಪವಿಧಿಗಳಿಗೆ ವಿರುದ್ಧವಾಗಿ ಅಥವಾ ಸಂಘದ ಹಿತಕ್ಕೆ ಧಕ್ಕೆಯಾಗುವಂತಹ ತೀರ್ಮಾನವನ್ನು ಮಂಡಲಿಯು ತೆಗೆದುಕೊಳ್ಳತಕ್ಕದ್ದಲ್ಲ. ಒಂದು ವೇಳೆ ಅಂತಹ ತೀರ್ಮಾನ ತೆಗೆದುಕೊಂಡಲ್ಲಿ... ನಿರ್ದೇಶಕರುಗಳು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗುತ್ತಾರೆ.
- ಸಂಘದ ಆಡಳಿತ ಮಂಡಳಿಯಲ್ಲಿ ಕಾಯಿದೆ, ನಿಯಮ ಮತ್ತು ಬೈಲಾಕ್ಕೆ ವಿರುದ್ಧವಾದ ತೀರ್ಮಾನ ಕೈಗೊಂಡ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಾಹಕರು ಆ ತೀರ್ಮಾನವನ್ನು ಜಾರಿಗೊಳಿಸುವಂತಿಲ್ಲ ಹಾಗೂ ಸಂಬಂಧಪಟ್ಟ ನಿಬಂಧಕರಿಗೆ ವರದಿ ಮಾಡತಕ್ಕದ್ದು.

ಟಿಪ್ಪಣಿಯ ಮುಖ್ಯ ಲಕ್ಷಣಗಳು

- ಸರಳತೆ
- ಸಂಕ್ಷಿಪ್ತತೆ
- ಖಚಿತತೆ
- ಅರ್ಥಪೂರ್ಣತೆ

ಸರಳತೆ ಮತ್ತು ಸಂಕ್ಷಿಪ್ತತೆ : ಸರಳತೆ ಮತ್ತು ಸಂಕ್ಷಿಪ್ತತೆಯು ಉತ್ತಮ ಟಿಪ್ಪಣಿಯ ಲಕ್ಷಣಗಳು. ವಿಷಯವನ್ನು ಸರಿಯಾಗಿ ಅರ್ಥ ಮಾಡಿಕೊಂಡು ನಂತರ ಸರಳವಾಗಿ ಅದರ ವಿವರವನ್ನು ಸಂಕ್ಷಿಪ್ತವಾಗಿ ತಿಳಿಸುವುದರಿಂದ ಮುಂದಿನ ಹಂತಗಳು ಸುಲಭವಾಗುತ್ತವೆ. ಟಿಪ್ಪಣಿಗಳಲ್ಲಿ ಮಿತ ಸಂಖ್ಯೆಯ ಶಬ್ದಗಳನ್ನು ಹಾಗೂ ಸರಳವಾದ ವಾಕ್ಯಗಳನ್ನು ಬಳಸುವುದು ಉತ್ತಮ. ಅನಗತ್ಯ ಪದಗಳು ಇರಕೂಡದು. ಉದಾಹರಣೆಗೆ... "ರೈತರಿಗೆ ಟ್ರ್ಯಾಕ್ಟರುಗಳ ಅವಶ್ಯಕತೆ ಇದೆಯೆಂದು ಕಂಡುಬಂದಿದ್ದರಿಂದ ಟ್ರ್ಯಾಕ್ಟರುಗಳನ್ನು ಯಾರು ಯಾರು ತಯಾರಿಸುವರು ಎಂಬ ಮಾಹಿತಿ ಪಡೆಯಲು ಪ್ರಕಟಣೆಯೊಂದನ್ನು ಹೊರಡಿಸಿ ಮುಂದೆ ಖಾಸಗಿಯವರಿಂದ ಟ್ರ್ಯಾಕ್ಟರುಗಳನ್ನು ಕೊಂಡು ರೈತರಿಗೆ ಕೊಡುವ ಬದಲು ತಾನೇ ಟ್ರ್ಯಾಕ್ಟರುಗಳನ್ನು ತಯಾರಿಸಿದರೆ ಒಳ್ಳೆಯದು ಎಂದು ನಿರ್ಧರಿಸಿ ಕೈಗಾರಿಕಾ ಇಲಾಖೆಗೆ ಈ ಸಂಬಂಧದಲ್ಲಿ ಯೋಜನೆಯೊಂದನ್ನು ತಯಾರಿಸಿ ಸಾಧ್ಯವಾದಷ್ಟು ಶೀಘ್ರವಾಗಿ ಕಳಿಸಬೇಕಾಗಿರುವುದರಿಂದ ವಿಷಯವನ್ನು ಮಾನ್ಯ ನಿರ್ದೇಶಕರ ತೀರ್ಮಾನಕ್ಕೆ ಮಂಡಿಸಲಾಗಿದೆ". ಇಲ್ಲಿ ಸರಳತೆ ಮತ್ತು ಸಂಕ್ಷಿಪ್ತತೆ ಇಲ್ಲ.

ಖಚಿತತೆ : ವಿಷಯದ ಬಗ್ಗೆ ಸ್ಪಷ್ಟ ನಿರ್ಣಯವನ್ನು ಕೈಗೊಳ್ಳಲು ಸಾಧ್ಯವಾಗುವಂತೆ ಹಾಗೂ ಯಾವುದೇ ಅನುಮಾನಕ್ಕೆ ಆಸ್ಪದವಿಲ್ಲದ ಖಚಿತತೆ ಟಿಪ್ಪಣಿಗಳಲ್ಲಿ ಇರಬೇಕು. ಆಗ ಮಾತ್ರ ನ್ಯೂನತೆಗಳಿಲ್ಲದ ಸ್ಪಷ್ಟ ನಿರ್ಣಯವನ್ನು ಆಡಳಿತ ಮಂಡಳಿಯಲ್ಲಿ ತೆಗೆದುಕೊಳ್ಳಲು ಸಹಾಯವಾಗುತ್ತದೆ. ಉದಾಹರಣೆಗೆ: "ವೇತನ ಪರಿಷ್ಕರಣೆಯ ಕುರಿತು, ಆಡಳಿತ ಮಂಡಳಿ ಮತ್ತು ನೌಕರರ ಯೂನಿಯನ್ ಪದಾಧಿಕಾರಿಗಳು ದಿನಾಂಕ 15.4.2016 ರಂದು ಮಾತುಕತೆ ನಡೆಸಿರುತ್ತಾರೆ. ಆದರೆ ಅವರು ಹೊಸ ಷರತ್ತುಗಳನ್ನು ಮುಂದಿಟ್ಟಿದ್ದರಿಂದ ಯಾವ ತೀರ್ಮಾನವೂ ಸಾಧ್ಯವಾಗಲಿಲ್ಲ". ಈ ಹಿನ್ನೆಲೆಯಲ್ಲಿ ದಿನಾಂಕ 11.7.2016 ರಂದು ನಡೆಯಲಿರುವ ಸಭೆಯಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಅಜೆಂಡಾ ಮಂಡಿಸಲಾಗಿದೆ. ಈ ಟಿಪ್ಪಣಿಯಲ್ಲಿ ಖಚಿತತೆಯ ಕೊರತೆ ಇದೆ. "ಅವರು" ಎಂದರೆ ಯಾರು? ಎಂಬ ಬಗ್ಗೆ ಅನುಮಾನ ಮೂಡುತ್ತದೆ.

ಅರ್ಥಪೂರ್ಣತೆ : ಇದು ಟಿಪ್ಪಣಿಯ ಅತಿ ಮುಖ್ಯವಾದ ಲಕ್ಷಣವಾಗಿದೆ. ಟಿಪ್ಪಣಿಗಳಲ್ಲಿ ವ್ಯಂಗ್ಯದ, ಕುಚ್ಯೋದ್ಯದ, ಉದ್ರೇಕದ ಪದಗಳನ್ನು ಬಳಸದೆ ಉತ್ತಮ/ಶಿಷ್ಟ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಬೇಕು.

ಟಿಪ್ಪಣಿ ಬರೆಯುವಾಗ ವಿಷಯ ನಿರ್ವಾಹಕನಿಗೆ ಇರಬೇಕಾದ ಬದ್ಧತೆ :

ವಿಷಯದ ಬಗ್ಗೆ ಅನ್ವಯವಾಗುವ ನಿಯಮಗಳು, ಪೂರ್ವ ನಿದರ್ಶನಗಳು, ತೀರ್ಮಾನದಿಂದ ಆಗಬಹುದಾದ ಪರಿಣಾಮಗಳು ಇತ್ಯಾದಿಗಳನ್ನೆಲ್ಲಾ ಟಿಪ್ಪಣಿಯಲ್ಲಿ ತರುವುದು ಮುಖ್ಯ. ಕಾಯಿದೆ ತಿದ್ದುಪಡಿಗಳು, ಇತ್ತೀಚಿನ ಆದೇಶಗಳು, ಸುತ್ತೋಲೆಗಳು ಹಾಗೂ ಮಂಡಲಿಗೆ ಇರುವ ಅಧಿಕಾರ ವ್ಯಾಪ್ತಿ ಇವುಗಳ ವಿವೇಚನೆಯಿಂದ ಟಿಪ್ಪಣಿ ನೀಡಬೇಕು. ಇದರಿಂದ ಸೂಕ್ತ ನಿರ್ಣಯಕ್ಕೆ ಸಹಾಯವಾಗುತ್ತದೆ.

ಟಿಪ್ಪಣಿಗೆ ಸಂಬಂಧಿಸಿದಂತೆ ಇತರ ಪ್ರಮುಖ ಅಂಶಗಳು:

- ಕಂಡಿಕೆ ಸಂಖ್ಯೆಯಲ್ಲಿ ಅನುಕ್ರಮ ಸಂಖ್ಯೆಯನ್ನು ನಮೂದಿಸಬೇಕು.
- ಟಿಪ್ಪಣಿಯ ಕೊನೆಯಲ್ಲಿ ಟಿಪ್ಪಣಿ ಬರೆದವರು ಸಹಿ ಮಾಡಿ ದಿನಾಂಕವನ್ನು ನಮೂದಿಸಬೇಕು.
- ಟಿಪ್ಪಣಿಯ ನಡುವೆ ತುಂಬಾ ಅಂತರವನ್ನು ಬಿಡಬಾರದು.
- ನಡುವೆ ಏನಾದರೂ ಸೇರಿಸಿದಲ್ಲಿ ಸಹಿ ಮಾಡಬೇಕು.
- ಟಿಪ್ಪಣಿ ಬರೆಯುವಾಗ ಚಿತ್ತು ಮಾಡಬಾರದು. ಅನಿವಾರ್ಯವಾಗಿ ಚಿತ್ತು ಆದಲ್ಲಿ ಅಂತಹ ಜಾಗದಲ್ಲಿ ಸಹಿ ಮಾಡಬೇಕು.
- ಟಿಪ್ಪಣಿಗಳನ್ನು ಟೈಪ್ ಮಾಡಿ ಮಂಡಿಸುವುದು ಉತ್ತಮ.

ಸಹಕಾರ ಸಂಘಗಳ ಮೂಲಕ ಆರ್ಥಿಕ ಸೇರ್ಪಡೆ, ಯುವಕರು, ಮಹಿಳೆಯರು ಮತ್ತು ದುರ್ಬಲ ವರ್ಗಗಳ ಬಲಪಡಿಸುವಿಕೆ – ಅಗತ್ಯ ತಾಂತ್ರಿಕತೆಯ ಅಳವಡಿಕೆ

▸▸ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

ಆರ್ಥಿಕ ಸೇರ್ಪಡೆ (Financial Inclusion) ಬಲಪಡಿಸುವಿಕೆ (Empowerment) ತಾಂತ್ರಿಕತೆಯ ಅಳವಡಿಕೆ (Technology adoption). ಈ ಮೂರು ಈ ದಿನಗಳಲ್ಲಿ ಅವಿಭಾಜ್ಯ ಎಂದು ಪರಿಗಣಿಸುವುದು ಅನಿವಾರ್ಯ. ಈ ಸತ್ಯವನ್ನು ಸಹಕಾರಿಗಳಾದ ನಾವು ಅರಿತುಕೊಳ್ಳಬೇಕಾಗಿದೆ.

ಆರ್ಥಿಕ ಸೇರ್ಪಡೆ ಎಂದರೇನು? ಸರಳವಾಗಿ ಹೇಳಬೇಕೆಂದರೆ ಯಾರು ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ರಕ್ಷಿಸಲು ಮತ್ತು ಅವಶ್ಯಕತೆ ಇದ್ದಾಗ ಪಡೆಯಲು ಸಾಂಸ್ಥಿಕ ಮೂಲಗಳನ್ನು ಹೊಂದಲು ಅನುಕೂಲತೆ ಹೊಂದಿರುತ್ತಾರೆ ಅವರು ಆರ್ಥಿಕ ಸೇರ್ಪಡೆಯಾಗಿರುತ್ತಾರೆ (Financially Included). ಯಾರು ಈ ಅವಶ್ಯಕತೆಗಳಿಗೆ ಇನ್ನೂ ಅಸಂಪ್ರದಾಯಿಕ, ಸಾಂಸ್ಥಿಕ ಮೂಲವಲ್ಲದ ಮೂಲವನ್ನು ಅವಲಂಭಿಸಿರುತ್ತಾರೆಯೋ ಅಥವಾ ವಂಚಿತರಾಗಿರುತ್ತಾರೆಯೋ ಅವರು ಆರ್ಥಿಕ ಸೇರ್ಪಡೆಯಿಂದ ಹೊರತಾಗಿರುತ್ತಾರೆ (Financially Excluded). ಯಾರು ಆರ್ಥಿಕ ಸೇರ್ಪಡೆಯಿಂದ ಹೊರತಾಗಿರುತ್ತಾರೋ ಅವರನ್ನು ಆರ್ಥಿಕ ಸೇರ್ಪಡೆ ಗೊಳಿಸುವುದೇ ಭಾರತದ ಆರ್ಥಿಕ ಸೇರ್ಪಡೆ ಕಾರ್ಯಕ್ರಮ.

ಭಾರತದಲ್ಲಿ 147.90 ದಶಲಕ್ಷ ಗ್ರಾಮೀಣ ಕುಟುಂಬಗಳಿವೆ. ಅದರಲ್ಲಿ 89.35 ದಶಲಕ್ಷ ಕುಟುಂಬಗಳು (60.4%) ರೈತ ಕುಟುಂಬಗಳು ಇವುಗಳಲ್ಲಿ ಶೇಕಡ 48.6 ಮಾತ್ರ ಸಂಸ್ಥೆಗಳ ಮೂಲಕ ಆರ್ಥಿಕ ಸೌಲಭ್ಯ ಪಡೆಯುತ್ತಿವೆ (ಬ್ಯಾಂಕ್, ಸಹಕಾರ ಸಂಘಗಳು 26.9%) ಅಥವಾ ಇತರೆ ಮೂಲಗಳನ್ನು (ಕೃಷಿ / ಇತರೆ ಲೇವಾದೇವಿದಾರರು, ವ್ಯಾಪಾರಸ್ಥರು, ನೆಂಟರು, ಸ್ನೇಹಿತರು, ವೈದ್ಯರು, ನ್ಯಾಯವಾದಿಗಳು, ಇತರರು 22%) ಅವಲಂಭಿಸಿರುತ್ತಾರೆ. ಉಳಿಕೆ ರೈತ ಕುಟುಂಬಗಳು ಶೇಕಡ 51.4 ರೈತ ಕುಟುಂಬಗಳು ಬ್ಯಾಂಕ್‌ಗಳಿಂದಾಗಲಿ ಸಹಕಾರಿ ಸಂಘಗಳಿಂದಾಗಲಿ ಅಸಾಂಸ್ಥಿಕ ಮೂಲಗಳಿಂದಾಗಲಿ ಆರ್ಥಿಕತೆಗೆ ಒಳಪಟ್ಟಿರುವುದಿಲ್ಲ ಎಂಬುದು ಆಶ್ಚರ್ಯವೂ, ಆಘಾತವನ್ನು ಉಂಟುಮಾಡುತ್ತದೆ. ರಾಷ್ಟ್ರೀಯ ಸರಾಸರಿ 48.6%ಕ್ಕೆ ಹೋಲಿಕೆ ಮಾಡಿದಾಗ ಪ್ರಾದೇಶಿಕವಾಗಿ ಅಜಗಜಾಂತರ ವ್ಯತ್ಯಯವನ್ನು ಕಾಣುತ್ತೇವೆ. ದಕ್ಷಿಣ 72.7% ಪಶ್ಚಿಮ ಮತ್ತು ಕೇಂದ್ರ 41.7% ಉತ್ತರ 51.4% ಪೂರ್ವ 39.9% ನೈರುತ್ಯ 19.7%.

ಸಾಂಸ್ಥಿಕ ಆರ್ಥಿಕ ಮೂಲ ಅವಲಂಭಿಸದ ಕುಟುಂಬಗಳು ಅಥವಾ ಯವುದೇ ಮೂಲ ಅವಲಂಭಿಸದ ಕುಟುಂಬಗಳು ಕೃಷಿಯಲ್ಲಿ ಹೂಡಿಕೆ ಬಂಡವಾಳವಿರಲಿ ದುಡಿಯುವ ಬಂಡವಾಳದ ಕೊರತೆ ಎದುರಿಸುತ್ತಿರುತ್ತಾರೆ ಮತ್ತು ಶೋಷಣೆಗೆ ಒಳಗಾಗಿರುತ್ತಾರೆ. ಅಲ್ಲದೆ, ದೇಶದ ಕೃಷಿ ಉತ್ಪನ್ನ ಮತ್ತು ಅದರಿಂದ ಒಟ್ಟಾರೆ ಉತ್ಪನ್ನ (ಜಿ.ಡಿ.ಪಿ)ದ ಮೇಲೆ ಆಗುತ್ತಿರುವ ದುಷ್ಪರಿಣಾಮದ ಅಗಾದತೆಯನ್ನು ಊಹಿಸಬಹುದಾಗಿರುತ್ತದೆ. ಜನಸಂಖ್ಯೆ ಆಧಾರಿತವಾಗಿ ಶೇಕಡ 70 ಜನಸಂಖ್ಯೆ ಇನ್ನೂಕೂಡ ಆರ್ಥಿಕವಾಗಿ ಸಂಸ್ಥೆಗಳ ಮೂಲ ಅವಲಂಭಿಸಿರುವುದಿಲ್ಲ.

ರಿಸರ್ವ್ ಬ್ಯಾಂಕಿನ ಮಾಜಿ ಅಧ್ಯಕ್ಷರು, ಪ್ರಧಾನ ಮಂತ್ರಿಗಳ ಆರ್ಥಿಕ ಸಲಹೆಗಾರರು, ಆಗಿದ್ದ ಡಾ॥ ರಂಗರಾಜನ್‌ರವರ ಸಮಿತಿ 2007 ಈ ರೀತಿ ವ್ಯಾಖ್ಯಾನಿಸಿದೆ. 'ವೆಚ್ಚವನ್ನು ಭರಿಸಬಹುದಾದ ದರಗಳಲ್ಲಿ ವಂಚಿತರಾದ ಸಮುದಾಯಗಳಿಗೆ, ದುರ್ಬಲ ವರ್ಗದವರಿಗೆ ಸಕಾಲದಲ್ಲಿ ಅವಶ್ಯಕತೆಯಷ್ಟು ಸಾಲ (ಪತ್ತು) ಮತ್ತು ಆರ್ಥಿಕ ಸೇವೆಗಳು ದೊರೆಯುವಂತೆ ದೃಡಪಡಿಸಿಕೊಳ್ಳುವ ಕ್ರಿಯೆಗೆ 'ಆರ್ಥಿಕ ಸೇರ್ಪಡೆ'' ಎಂದು ಕರೆಯಲಾಗಿದೆ.

ಆರ್ಥಿಕ ಸೇರ್ಪಡೆ ಕಾರ್ಯಕ್ರಮದ ಅನುಷ್ಠಾನಕ್ಕೆ ಭಾರತ ಸರ್ಕಾರ, ರಿಸರ್ವ್‌ಬ್ಯಾಂಕ್ ಮತ್ತು ನಬಾರ್ಡ್ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಇದರಲ್ಲಿ ಆರಂಭಿಕ ಕಾರ್ಯಕ್ರಮವೆಂದರೆ 'ಶೂನ್ಯ' ಶಿಲ್ಕು ಖಾತೆ ತೆರೆಯಲು ಅನುಮತಿಸಿ ಜಿಲ್ಲಾವಾರು ಗುರಿಗಳನ್ನು ನಿಗದಿಪಡಿಸಿ ಕೆಲವು ಜಿಲ್ಲೆಗಳನ್ನು ಸಂಪೂರ್ಣ ಆರ್ಥಿಕ ಸೇರ್ಪಡೆ ಜಿಲ್ಲೆಗಳಾಗಿ ಘೋಷಿಸಲಾಯಿತು. ಇದರಂತೆ ಬ್ಯಾಂಕ್‌ಗಳು ಸರಳ ಕೆ.ವೈ.ಸಿ ಮಾನದಂಡಗಳನ್ನು ಅನುಸರಿಸಲು ತಿಳಿಸಲಾಯಿತು. ಅಂದರೆ ಖಾತೆ ತೆರೆಯಲು 'ನಿಮ್ಮ ಗ್ರಾಹಕರನ್ನು ತಿಳಿಯರಿ' (ಕೆ.ವೈ.ಸಿ) ಮಾನದಂಡಗಳಲ್ಲಿ ವ್ಯಕ್ತಿಯನ್ನು, ಅವರ ವಿಳಾಸ ಗುರುತಿಸಲು ಸರಳೋಪಯಗಳಾದ 'ಮತದಾನದ ಗುರುತು ಚೀಟಿ' ಈ ರೀತಿಯ ಮಾನದಂಡ ಜೊತೆಗೆ ಮತ್ತೊಬ್ಬರು ಪರಿಚಯಿಸುವ ಅನಗತ್ಯತೆ. ಖಾತೆಯಲ್ಲಿ ಶಿಲ್ಕು ಇಲ್ಲದೆ ಶೂನ್ಯ ಖಾತೆ ತೆರೆಯಲು ಅಂದರೆ ಸಾಂಕೇತಿಕವಾಗಿ ರೂ. ಐದು ಅಥವಾ ಹತ್ತುಗಳು ಮಾತ್ರ ಇದ್ದರೆ ಸಾಕು. ಬ್ಯಾಂಕಿನಲ್ಲಿ ಹಣ ಕೂಡಿ ಇಡುವ ಅಭ್ಯಾಸವಾದ ನಂತರ ರೂ 50,000/– ಶಿಲ್ಕು ಆದಲ್ಲಿ ಅದನ್ನು ಉಳಿತಾಯ ಖಾತೆ ಎಂದು ಪರಿಗಣಿಸಲು ಮತ್ತು ರೂ. 50,000/– ಗಳ ಸಾಲದ ಮಿತಿ ಒದಗಿಸಲು ಅವಕಾಶ ನೀಡಲಾಗಿತ್ತು. ಈ ಯೋಜನೆಯಲ್ಲಿ ನಿರೀಕ್ಷಿತ ಫಲಿತಾಂಶಗಳು ದೊರೆಯಲಿಲ್ಲ. ಇದರೊಡನೆ ವಿದ್ಯುನ್ಮಾನ ಬ್ಯಾಂಕಿಂಗ್‌ನಲ್ಲಿ, ತಾಂತ್ರಿಕತೆಯಿಂದ ಕ್ರಾಂತಿಯಂತೆ ಬದಲಾವಣೆಗಳು ಆದವು. ಇದರಲ್ಲಿ ಮಹತ್ತರ ಕ್ರಾಂತಿ ಎಂದರೆ ಕೋರ್ ಬ್ಯಾಂಕಿಂಗ್ ವ್ಯವಸ್ಥೆ (CBS) ಜಾರಿಯಲ್ಲಿ ಬಂದದ್ದು. ಕೋರ್ (CORE) ಎಂದರೆ (Centralized Online Real Exchange) ಕೇಂದ್ರೀಯ ವ್ಯವಸ್ಥೆಯಡಿಯಲ್ಲಿ ತತ್‌ಕ್ಷಣದಲ್ಲಿ ಹಣ ವಿನಿಮಯ ಕೇಂದ್ರೀಯ ದತ್ತಾಂಶ ಕೇಂದ್ರದಿಂದ ಮಾಹಿತಿ (ಹಣ) ಅಂತರ್ಜಾಲ (Internet) ಮೂಲಕ ತತ್‌ಕ್ಷಣದಲ್ಲಿ ವಿನಿಮಯವಾಗುವುದರಿಂದ ಇದರ ಅನುಕೂಲತೆಯನ್ನು ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಉಪಯೋಗಿಸಿಕೊಳ್ಳಲು ಅವಕಾಶ ತೆರೆಯಿತು.

ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಕೆಲವು ಬದಲಾವಣೆಗಳನ್ನು ತರಲಾಯಿತು. ಈ ಕಾರ್ಯಕ್ರಮ ಯಶಸ್ವಿ ಆಗಬೇಕಿದಲ್ಲಿ ಆರ್ಥಿಕ ಸೇರ್ಪಡೆಗೆ ಒಳಗಾಗದ ಜನ ಸಮೂಹ ಇರುವ ದೇಶದ ಮೂಲೆ ಮೂಲೆಯ ಗ್ರಾಮಾಂತರ ಪ್ರದೇಶಗಳಿಗೆ ಬ್ಯಾಂಕಿಂಗ್ ಅನುಕೂಲತೆಗಳು ದೊರೆಯುವಂತಾಗಬೇಕು. ಇದಕ್ಕೆ ನೆರವಿಗೆ ಬಂದಿರುವುದು ನೂತನ ತಾಂತ್ರಿಕತೆಯ ಅಳವಡಿಕೆ.

ಆರಂಭದಲ್ಲಿ ವಾಣಿಜ್ಯ ಬ್ಯಾಂಕ್‌ಗಳು ತದನಂತರ ಗ್ರಾಮೀಣ

ಬ್ಯಾಂಕ್‌ಗಳು ಮತ್ತು ತದನಂತರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕಟ್ಟ ಕಡೆಯ ಮನುಷ್ಯನನ್ನು ಮುಟ್ಟುವ ಸಾಧ್ಯತೆ ಇರುವುದು ಸಹಕಾರ ಕ್ಷೇತ್ರ ಎಂದು ಕಂಡುಕೊಂಡು ಸಹಕಾರ ಬ್ಯಾಂಕ್‌ಗಳನ್ನು ಸೇರ್ಪಡೆಗೊಳಿಸಲಾಯಿತು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಯಾಂತ್ರಿಕತೆ ಅಳವಡಿಕೆಯಲ್ಲಿ ಮಂದಗತಿಯಾದದ್ದೂ ಕಾರಣ ಎಂದು ಒಪ್ಪಲೇಬೇಕು. ಇದೀಗ ಗ್ರಾಮಾಂತರ ಪ್ರದೇಶದಲ್ಲಿನ ಅಂಚೆ ಕಛೇರಿಗಳನ್ನೂ 'ಪಾವತಿ ಬ್ಯಾಂಕ್'ಗಳಾಗಿ ಪರಿವರ್ತಿಸಿರುವುದನ್ನು ಗಮನಿಸಬೇಕು.

ನಿಜವಾದ ಅರ್ಥದಲ್ಲಿ ಆರ್ಥಿಕ ಸೇರ್ಪಡೆ ಕಾರ್ಯಕ್ರಮದ, ಚಿಂತನೆ ಆರಂಭಗೊಂಡಿರುವುದೇ 'ಸಹಕಾರ ಚಳುವಳಿ'ಯಿಂದ, ಚಳುವಳಿಯ ಆರಂಭವೇ ಆರ್ಥಿಕ ಸೇರ್ಪಡೆಯ ಕಾರ್ಯಕ್ರಮದ ದ್ಯೋತಕ. ಸಹಕಾರ ಸಂಘಗಳ ಉಪನಿಯಮಗಳಲ್ಲಿ ಸದಸ್ಯರಿಗೆ 'ಥ್ರಿಫ್ಟ್' ಬಲವಂತದ ಸಣ್ಣ ಉಳಿತಾಯಕ್ಕೆ ಒತ್ತು. ಅವಶ್ಯವಿದ್ದವರಿಗೆ ಸಾಲ, ಸರಳ ಬಡ್ಡಿದರದಲ್ಲಿ ಮರುಪಾವತಿ. ಈ ಆರ್ಥಿಕ ಶಿಸ್ತು ಮತ್ತು ಸರ್ವರನ್ನೂ ಒಳಗೊಳ್ಳುವಿಕೆ ಆರ್ಥಿಕ ಸೇರ್ಪಡೆ ಕಾರ್ಯಕ್ರಮದ ಗುರಿ. ತನ್ಮೂಲಕ ಹರಿದು ಹಂಚಿಹೋಗಿರುವ ಸಂಪನ್ಮೂಲಗಳು ರಾಷ್ಟ್ರದ ಪ್ರಮುಖವಾಹಿನಿಗೆ ಸೇರ್ಪಡೆ ತನ್ಮೂಲಕ ಅಭಿವೃದ್ಧಿಗೆ ಅವಕಾಶ. ಬೃಹತ್ ಜನಸ್ತೋಮವು ಆರ್ಥಿಕ ಸೇರ್ಪಡೆಯಿಂದ ಹೊರಗುಳಿಯಲು ಕಾರಣಗಳೇನು? ಕಾರಣಗಳನ್ನು ಗುರುತಿಸಿ ಅವುಗಳನ್ನು ಹೋಗಲಾಡಿಸಿದಲ್ಲಿ ಎಲ್ಲರನ್ನೂ ಒಳಗೊಂಡಂತೆ ಅಭಿವೃದ್ಧಿಗೆ ಕಾರಣವಾಗುತ್ತದೆ. ಇದನ್ನು ಮನಗಂಡು ನೂತನ ಆರ್ಥಿಕ ಸೇರ್ಪಡೆ ಕಾರ್ಯಕ್ರಮ ರೂಪಿಸಲಾಗಿದೆ ಮತ್ತು ಈ ಕಾರ್ಯಕ್ರಮ 'ಪ್ರಧಾನಮಂತ್ರಿಗಳ ಜನಧನ ಯೋಜನೆ'ಯಾಗಿ ಮಾರ್ಪಾಡುಗೊಂಡಿದೆ.

ಈ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಜಿಲ್ಲೆಯ ಅಗ್ರ ಬ್ಯಾಂಕ್‌ಗಳು 'ಆರ್ಥಿಕ ಸಾಕ್ಷರತೆ' ಕೇಂದ್ರಗಳನ್ನು ತೆರೆದು ಅದರ ಮೂಲಕ ಮೊಟ್ಟ ಮೊದಲಿಗೆ ಜನರನ್ನು 'ಆರ್ಥಿಕ ಸಾಕ್ಷರ'ರನ್ನಾಗಿ ಮಾಡುವುದು. ಈ ಕೇಂದ್ರಗಳಲ್ಲಿ ಜನರಲ್ಲಿ ಜಾಗೃತಗೊಳಿಸಲು ಅವಶ್ಯ ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ವಿವಿಧ ಶ್ರವ್ಯ. ದೃಶ್ಯ ಮಾಧ್ಯಮಗಳ ಸದ್ವಿನಿಯೋಗ. ಸಮೂಹಗಳನ್ನು ಒಳಗೊಂಡಂತೆ ವಿವಿಧ ಗ್ರಾಮೀಣ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಆರ್ಥಿಕ ಯೋಜಾನಾತ್ಮಕ ಬಳಕೆ, ವಿನಿಯೋಗ, ಆರ್ಥಿಕ ಅಶಿಸ್ತಿಗೆ ಕಾರಣವಾದ ಸಾಮಾಜಿಕ ಪಿಡುಗುಗಳನ್ನು ಬಿಡಿಸುವುದು ಕುಟುಂಬ, ಅದರಲ್ಲಿಯೂ ಮಹಿಳಾ ಕೇಂದ್ರಿಕೃತವಾಗಿ ಸರಳ ಆರ್ಥಿಕ ನಿರ್ವಹಣೆಯ ಶಿಸ್ತನ್ನು ತರುವುದು, ಪುಸ್ತಕಗಳು, ಕಿರುಹೊತ್ತಿಗೆಗಳು, ಪೋಸ್ಟರ್‌ಗಳು, ಬೀದಿನಾಟಕಗಳು, ಲಾವಣಿಗಳು, ಜಾಹಿರಾತು ಹೀಗೆ ಹತ್ತು ಹಲವು ರೀತಿಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಶಾಲೆ, ಕಾಲೇಜುಗಳಲ್ಲಿ ಯುವಜನರಲ್ಲಿ ಜಾಗೃತಿ ಉಂಟು ಮಾಡಲಾಗುತ್ತಿದೆ.

ಕುಟುಂಬ ನಿರ್ವಹಣೆಯಲ್ಲಿ ಗಳಿಸುವ ಸೀಮಿತ ಆಧಾಯವನ್ನು ಆದ್ಯತೆಮೇರೆಗೆ ಖರ್ಚುಮಾಡುವ ವಿಧಾನಗಳೂ ಮೊದಲನೆಯದಾಗಿ ಆಹಾರ, ಅದರಲ್ಲಿಯೂ ಪೌಷ್ಠಿಕ, ಸಮತೋಲನ ಆಹಾರ ಸೇವಿಸುವಿಕೆ. ಹಸಿವೆಯಿಂದ ದೂರವಾಗುವುದು ಆಹಾರ ಸಂರಕ್ಷಣೆಗೆ ಆದ್ಯತೆ. ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹ, ದೇವದಾಸಿ ಪದ್ಧತಿ ಮುಂತಾದವುಗಳಿಂದ ಬಿಡುಗಡೆ, ಸಾಕ್ಷರತೆಗೆ ಆದ್ಯತೆ. ಹೆಣ್ಣುಮಕ್ಕಳ ಶಿಕ್ಷಣ, ಆರೋಗ್ಯಕ್ಕೆ ಗಮನ, ಬಸರಿ ಬಾಣಂತಿಯರ ಆರೈಕೆ, ತಾಯಿ ಮಗುವಿನ ಆರೋಗ್ಯ ನಿರ್ವಹಣೆಗೆ ಆದ್ಯತೆ, ಕುಡಿತ, ಧೂಮಪಾನ, ತಂಬಾಕು ಸೇವನೆ ದುಶ್ಚಟಗಳಿಂದ ಬಿಡುಗಡೆ. ಶ್ರಮ ಜೀವನಕ್ಕೆ ಆದ್ಯತೆ, ವಯಸ್ಕ ಶಿಕ್ಷಣ, ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ, ಆರೋಗ್ಯ ನಿರ್ವಹಣೆಗೆ ಪ್ರಾಮುಖ್ಯತೆ, ಒಟ್ಟಾರೆ ಕುಟುಂಬದ ಆದಾಯದಲ್ಲಿ ಸಂಸಾರ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಉಳಿತಾಯ ಮಾಡುವುದು. ಕಷ್ಟಪಟ್ಟು ಮಾಡಿದ ಉಳಿತಾಯದ ಹಣವನ್ನು ಲಭ್ಯವಿರುವ ಕಿರು ಸ್ಥಳದಲ್ಲಿ ಅಲ್ಲಿ ಇಲ್ಲಿ (ಸಾಸಿವೆ ಡಬ್ಬಿ, ಮರದ ತೊಲೆಯಡಿಯಲ್ಲಿ) ಇಟ್ಟು ಕಳೆದುಕೊಳ್ಳುವುದು, ಹಾಳು ಮಾಡಿಕೊಳ್ಳುವುದು ಚೀಟಿ, ಬಡ್ಡಿ ವ್ಯವಹಾರ, ಬೇರೆಯವರಿಗೆ ರಕ್ಷಣೆಗಾಗಿ ನೀಡಿ ಹಣ ಕಳೆದುಕೊಳ್ಳುವುದು ಈ ರೂಡಿಗಳನ್ನು ತಪ್ಪಿಸುವುದು. ಉಳಿತಾಯವನ್ನು ಬ್ಯಾಂಕಿನ 'ಉಳಿತಾಯ ಖಾತೆ'ಯಲ್ಲಿರಿಸುವುದು ಕುಟುಂಬದ ಆದಾಯ ವೆಚ್ಚಗಳ ಬಜೆಟ್ ತಯಾರಿಕೆ ಅದರಂತೆ ಕುಟುಂಬ ನಿರ್ವಹಣೆ ಮಾಡುವುದು. ಇವುಗಳ ಬಗ್ಗೆ ಜಾಗೃತಿ ಮೂಡಿಸುವುದು 'ಆರ್ಥಿಕ ಸಾಕ್ಷರತಾ ಕೇಂದ್ರದ' ಕರ್ತವ್ಯವಾಗಿರುತ್ತದೆ. ಎಲ್ಲ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕ್‌ಗಳು "ಆರ್ಥಿಕ ಸಾಕ್ಷರತಾ ಕೇಂದ್ರ'ಗಳನ್ನು ತೆರೆದಿವೆ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

ನೂತನ ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿನ ಉದ್ದೇಶ ಕುಟುಂಬ ಕೇಂದ್ರೀಕೃತವಾಗಿ ಅದರಲ್ಲಿಯೂ ಮಹಿಳೆಯರಿಗೆ ಆದ್ಯತೆ ನೀಡಿ ಆರ್ಥಿಕ ಒಳಗೊಳ್ಳುವಿಕೆಗೆ ಸಾಧ್ಯಗೊಳಿಸುವುದು. ಇದಕ್ಕಾಗಿ ಆದ್ಯತಾ ಅನುಸಾರ ಆರ್ಥಿಕ ಸಾಕ್ಷರರನ್ನಾಗಿ ಮಾಡುವ ಜೊತೆಗೆ (1) ಉಳಿತಾಯ (2) ಸಾಲ (3) ಪಾವತಿಗಳು (4) ವಿಮೆ (5) ಪಿಂಚಣಿ ಸೌಲಭ್ಯಗಳು, ಇವುಗಳನ್ನು ಒದಗಿಸುವುದು.

1. ಉಳಿತಾಯ : ಕುಟುಂಬದಲ್ಲಿ ಕನಿಷ್ಠ ಎರಡು ಖಾತೆಗಳನ್ನು ತೆರೆಯುವುದು ಒಂದು ಕಡ್ಡಾಯವಾಗಿ ಮಹಿಳೆಯರದು ಆಗಿರತಕ್ಕದ್ದು. ಈ ಖಾತೆಯು 'ಶೂನ್ಯ' ಶಿಲ್ಕು ಖಾತೆ ಆಗಿರುತ್ತದೆ. (Zero Balance Account) 'ತೊಡಕು ರಹಿತ' ಖಾತೆ (No Frill Account) ಈಗ ಇದನ್ನು (BSDA) ಮೂಲ ಉಳಿತಾಯ ಠೇವಣಿ ಖಾತೆ (Basic Savings Deposit Account) ಎಂದು ಕರೆಯಲಾಗುತ್ತಿದೆ. ಈ ಖಾತೆ ತೆರೆಯಲು ತಮ್ಮ ಗ್ರಾಹಕರ ಬಗ್ಗೆ ತಿಳಿಯಲು (ಕೆ.ವೈ.ಸಿ) ಸರಳ ಗುರುತಿಸುವಿಕೆ ವಿಧಾನಗಳನ್ನು ಅಳವಡಿಸಿಕೊಳುವುದು ಯಾವುದೇ ಪರಿಚಯಿಸುವವರು ಅನಗತ್ಯ. (ಮತದಾರ ಗುರುತು ಚೀಟಿ) ಈಗ 'ಆಧಾರ್' ಕಾರ್ಡ್ ಇದ್ದಲ್ಲಿ ಅಥವಾ ಸಂಖ್ಯೆ ಇದ್ದಲ್ಲಿ ಸಾಕಾಗುತ್ತದೆ. ಯಂತ್ರಾಧಾರಿತವಾಗಿ 'ಹೆಬ್ಬೆಟ್ಟಿನ ಗುರುತು' ಮಾತ್ರ ಸಾಕಾಗಿದೆ. ಯಂತ್ರದ ಮೇಲೆ ಹೆಬ್ಬೆಟ್ಟಿನ ಗುರುತು ಮೂಡಿಸಿದರೆ 'ಆಧಾರ್'ನಲ್ಲಿನ ಎಲ್ಲ ವಿವರಗಳು ಲಭ್ಯವಾಗುತ್ತದೆ. ಇದರಿಂದ ತತ್‌ಕ್ಷಣವೇ ಖಾತೆ ತೆರೆಯಲು ಸಾಧ್ಯವಾಗಿದೆ.

2. ಸಾಲ (ಪತ್ತು) : ಉಳಿತಾಯ ಖಾತೆ ತೆರೆದು ವ್ಯವಹಾರಗಳು ಉತ್ತಮವಾಗಿದ್ದಲ್ಲಿ (ಠೇವಣಿಸುವ. ಹಿಂಪಡೆಯುವುದು) ಅವರಿಗೆ ಒಂದು ಲಕ್ಷದವರೆವಿಗೂ ಯಾವುದೇ ಖಾತ್ರಿ ಇಲ್ಲದೇ ಸಾಲ ನೀಡಬಹುದಾಗಿದೆ. ಸಾಮಾನ್ಯ ಕ್ರೆಡಿಟ್ ಕಾರ್ಡ್, (ಜಿ.ಸಿ.ಸಿ) ಇದನ್ನು ಈಗ ಖಾತೆ ನಿರ್ವಹಿಸಲು 'ರೂಪೆ' (RuPay) ಕಾರ್ಡ್ ಮೂಲಕ ನೀಡಬಹುದಾಗಿದೆ. ಈ 'ಕ್ರೆಡಿಟ್' ಅಥವಾ 'ಡೆಬಿಟ್' ಕಾರ್ಡ್‌ನ್ನು ದೇಶ ಯಾವುದೇ ಎ.ಟಿ.ಎಂ (ಆಟೋಮ್ಯಾಟಿಕ್ ಟೆಲ್ಲರ್ ಮೆಷಿನ್) ಕೌಂಟರ್‌ನಲ್ಲಿ ಉಪಯೋಗಿಸಿ ಹಣ ಡ್ರಾ ಮಾಡಬಹುದಾಗಿದೆ. ಇತ್ತೀಚಗಿನ 'ನಬಾರ್ಡ್' ನಿರ್ದೇಶನದಂತೆ ಕೆ.ಸಿ.ಸಿ ಸಾಲವನ್ನು 'ರೂಪೆ' ಕಾರ್ಡ್ ಮೂಲಕವೇ ವಿತರಿಸಬೇಕಾಗಿದೆ.

ಮುಂದಿನ ಸಂಚಿಕೆಗೆ...

ಸಹಕಾರ ಸಂಘ / ಬ್ಯಾಂಕುಗಳ ದಾವಾ ಪಂಚಾಯ್ತಿ ಹಾಗೂ ಅಮಲ್ಜಾರಿ ಮಾರ್ಗದರ್ಶಿ

ಶ್ರೀ ಎಂ.ಪಿ. ಶೆಲ್ಲಿಕೇರಿ, ಕ.ಸ.ಸೇ. ಸಹಕಾರ ಸಂಘಗಳ ಉಪನಿಬಂಧಕರು, ಬಾಗಲಕೋಟ.

ಅಮಲ್ಜಾರಿ ಶುಲ್ಕ

1. ಅಮಲ್ಜಾರಿ ಮೊತ್ತ ರೂ. 25000/– ಗಳವರೆಗೆ ಶೇ.3%ರಷ್ಟು
2. ರೂ. 25001/–ರಿಂದ 50000/–ಗಳವರೆಗೆ ಶೇ.2.5%ರಷ್ಟು
3. ರೂ. 50001/–ರಿಂದ 100000/–ದವರೆಗೆ ಶೇ.2% ರಷ್ಟು
4. ರೂ. 100001/–ರಿಂದ ರೂ200000/–ರವರೆಗೆ ಶೇ1.5%ರಷ್ಟು
5. ರೂ. 2000001/–ರ ಮೇಲ್ಪಟ್ಟು ಶೇ.1.00ರಷ್ಟು ಶುಲ್ಕ ಪಾವತಿಸಬೇಕು.

ವಿವರ	ಗರಿಷ್ಟ ಮೊತ್ತಕ್ಕೆ ಅನ್ವಯವಾಗುವ ಶುಲ್ಕ
1ನೇ ಹಂತ ರೂ. 25000ರವರೆಗೆ	ರೂ. 750/–
2ನೇ ಹಂತ ಹೆಚ್ಚುವರಿ 25000ರವರೆಗೆ	ರೂ. 625
3ನೇ ಹಂತ 50000ರವರೆಗೆ	ರೂ. 1000/–
4ನೇ ಹಂತ 100000ರವರೆಗೆ	ರೂ. 1500/–

ಹಾಗೆಯೇ ಬ್ಯಾಂಕು ತನ್ನದೇ ಸಿಬ್ಬಂದಿಯನ್ನು ಮಾರಾಟಾಧಿಕಾರಿಯನ್ನಾಗಿ ಹೊಂದಿದ್ದರೆ ಮೇಲ್ಕಂಡ ಒಟ್ಟು ಮೊತ್ತದ ಶೇ 70%ರಷ್ಟು ತನ್ನಲ್ಲಿ ಉಳಿಸಿಕೊಂಡು ಬಾಕಿ ಶೇ.30%ರಷ್ಟು ಮೊತ್ತವನ್ನು ಮಹಾಮಂಡಳಕ್ಕೆ ಚೆಕ್ಕು ಅಥವಾ ಡಿಡಿ ಮೂಲಕ ಪಾವತಿಸಬೇಕು. ಬ್ಯಾಂಕು ಸರ್ಕಾರಿ ಅಧಿಕಾರಿಯನ್ನು ಮಾರಾಟಾಧಿಕಾರಿಯನ್ನಾಗಿ ಹೊಂದಿದ್ದರೆ, ಶೇ.50% ರಷ್ಟು ಮೊತ್ತವನ್ನು ತನ್ನಲ್ಲಿಟ್ಟುಕೊಂಡು ಬಾಕಿ ಶೇ.50% ರಷ್ಟನ್ನು ಮಹಾಂಡಳಕ್ಕೆ ಅಮಲ್ಜಾರಿ ಶುಲ್ಕವಾಗಿ ಪಾವತಿಸಬೇಕಾಗುತ್ತದೆ.

- ಹೀಗೆ ಅಮಲ್ಜಾರಿ ಅರ್ಜಿ ಎಲ್ಲ ರೀತಿಯಲ್ಲೂ ಪರಿಶೀಲಿಸಿ ಪರಿಪೂರ್ಣವಾಗಿದೆ ಎಂದು ಕಂಡುಬಂದಾಗ ವಸೂಲಾಧಿಕಾರಿಯು ಅಮಲ್ಜಾರಿ ಅರ್ಜಿಯನ್ನು ಒಪ್ಪಿಕೊಂಡು ಅಮಲ್ಜಾರಿ ಸಂಖ್ಯೆ ನೀಡುವರು.
- ವಸೂಲಾತಿ ಅಧಿಕಾರಿಯು ಮಾರಾಟಾಧಿಕಾರಿಗಳಿಗೆ ಅಮಲ್ಜಾರಿಗಾಗಿ ಆದೇಶ ನೀಡಿದ ನಂತರ ಮಾರಾಟಾಧಿಕಾರಿಗಳು ನಿಗಧಿಪಡಿಸಿದ ರಿಜಿಸ್ಟರಲ್ಲಿ ತಪ್ಪದೇ ದಾಖಲೆ ಮಾಡಿಕೊಳ್ಳಬೇಕು. ನಂತರ 7 ದಿನಗಳೊಳಗೆ ಹಣ ಪಾವತಿ ಮಾಡುವಂತೆ, ತಪ್ಪಿದಲ್ಲಿ ಜಪ್ತಿ ಕ್ರಮ ಕ್ರಮಕೈಕೊಳ್ಳಲಾಗುವುದೆಂದು ತಿಳಿಯಪಡಿಸುವ ನೋಟೀಸನ್ನು (ಕೆಂಪು ಬಣ್ಣದ ತಗಾದೆ ನೋಟೀಸ್‌ನ್ನು) ಸಾಲಗಾರರಿಗೆ / ಜಾಮೀನುದಾರರಿಗೆ ಕಳಿಸಬೇಕು (ಇದರಲ್ಲಿ ಪೊಲೀಸ ಇಲಾಖೆಗೂ ಮಾಹಿತಿ ನೀಡಬಹುದು) ಒಂದು ವೇಳೆ ಸಾಲಗಾರನು / ಜಾಮೀನುದಾರರು ನೋಟೀಸಿಗೆ ಸ್ಪಂದಿಸದಿದ್ದಲ್ಲಿ ನಿಗಧಿತ ನಮೂನೆಯಲ್ಲಿನ ವಿವಿಧ ಫಾರ್ಮಗಳ ಮೂಲಕ ವಸೂಲಾತಿ ಕ್ರಮ ಕೈಕೊಳ್ಳತಕ್ಕದ್ದು.

ತೀರ್ಪುಋಣಿ ಮರಣಾಂತರ ಅವನ ಕಾನೂನು ಸಮ್ಮತ ಪ್ರತಿನಿಧಿ ಮೇಲೆ ಕ್ರಮ (ನಿ.45)

- ಅಮಲ್ಜಾರಿ ಪ್ರಕ್ರಿಯೆ ಜಾರಿಯಲ್ಲಿರುವಾಗ ತೀರ್ಪು ಸಾಲಗಾರ ಮೃತನಾದರೆ ಮಾರಾಟಾಧಿಕಾರಿಯು ಕೂಡಲೇ ಮೃತತೀರ್ಪು ಸಾಲಗಾರನ ವಾರಸುದಾರರ ಯಾದಿಯನ್ನು ಹಾಗೂ ಮರಣ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕೃತ ಪ್ರಾಧಿಕಾರದಿಂದ ಪಡೆದು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 45ರಡಿ ಪ್ರಸ್ತಾವನೆಯನ್ನು ವಸೂಲಾಧಿಕಾರಿಗೆ ವಾರಸುದಾರರ ಮೇಲೆ ಮುಂದಿನ ಕ್ರಮಕೈಕೊಳ್ಳಲು ಆದೇಶ ನೀಡುವಂತೆ ಕೋರಿ ಸಲ್ಲಿಸತಕ್ಕದ್ದು. ಸದರಿ ಪ್ರಸ್ತಾವನೆ ಪರಿಶೀಲಿಸಿ ವಸೂಲಾಧಿಕಾರಿಯು ಮೃತತೀರ್ಪು ಸಾಲಗಾರನ ವಾರಸುದಾರರಿಗೆ ಯುಕ್ತ ಸಮಯದ ನೋಟೀಸ್ ನೀಡಿ ವಾರಸುದಾರರ ವಿಚಾರಣೆ ನಡೆಸಿ ಆದೇಶ ನೀಡಬೇಕು. ತದನಂತರ ಮೃತ ತೀರ್ಪುಋಣಿಯ ವಾರಸುದಾರರ ಮೇಲೆ ಕ್ರಮವಿಡುವದು.

ನೋಟೀಸ್/ಸಮನ್ಸ್‌ಗಳನ್ನು ಜಾರಿ ಮಾಡುವ ವಿಧಾನ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಯಾವದೇ ಆದೇಶ ಜಾರಿ ಮಾಡಬೇಕಾದಲ್ಲಿ ನೋಟೀಸ್ ನೀಡಬೇಕು ನೋಟೀಸ್/ಸಮನ್ಸ್‌ಗಳನ್ನು ಜಾರಿ ಮಾಡುವ ವಿಧಗಳನ್ನು ನಿಯಮ 32(3)ರಲ್ಲಿ ವಿವರವಾಗಿ ನೀಡಿದೆ.

1. ಅದನ್ನು ಅಂಥ ವ್ಯಕ್ತಿಗೆ ಕೊಡುವ ಅಥವಾ ಅವನಿಗೆ ಮುಟ್ಟುವಂತೆ ಮಾಡುವ ಮೂಲಕ.
2. ಅವನುಸಿಗದಿದ್ದ ಪಕ್ಷದಲ್ಲಿ ಅವನು ಕೊನೆಯಲ್ಲಿ ವಾಸಿಸುತ್ತಿದ್ದಾನೆಂದು ಅಥವಾ ವ್ಯವಹಾರ ಮಾಡುತ್ತಿದ್ದಾನೆಂದು ಗೊತ್ತಿರುವ ಸ್ಥಳದಲ್ಲಿ ಅದನ್ನು ಅಂಟಿಸುವದರ ಮೂಲಕ ಅಥವಾ ಅವನು ಕುಟುಂಬದ ಯಾರಾದರೂ ವಯಸ್ಕ ಸದಸ್ಯರಿಗೆ ಅದನ್ನುಕೊಡುವದರ ಮೂಲಕ ಅಥವಾ ಅವರಿಗೆ ಮುಟ್ಟುವಂತೆ ಮಾಡುವದರ ಮೂಲಕ
3. ದಾಖಲೆಗಳ ಪ್ರಕಾರ ತಿಳಿದಿರುವ ಅರ್ಜಿ ಕೊನೆಯ ವಿಳಾಸಕ್ಕೆ ಅಂಚೆ ಸ್ವೀಕೃತಿಯೊಂದಿಗೆ ನೋಂದಾಯಿತ ಅಂಚೆ ಮುಖಾಂತರ ಕಳಿಸುವದರ ಮೂಲಕ.
4. ಮೇಲೆ ಹೇಳಿದ ಯಾವ ಕ್ರಮಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ ಅವನು ಕೊನೆಯಲ್ಲಿ ವಾಸಿಸುತ್ತಿದ್ದಾನೆಂದು ಅಥವಾ ವ್ಯವಹಾರ ಮಾಡುತ್ತಿದ್ದಾನೆಂದು ಗೊತ್ತಿರುವ ಸ್ಥಳದಲ್ಲಿ ಯಾವದಾದರೂ ಎದ್ದು ಕಾಣುವ ಭಾಗದಲ್ಲಿ ಅದನ್ನು ಅಂಟಿಸುವದರ ಮೂಲಕ ಜಾರಿ ಮಾಡಬಹುದು. ಆದರೆ ಹಾಗೆ ಜಾರಿ ಮಾಡಿದ ಬಗ್ಗೆ ಸ್ಥಳ ವೇಳೆ ಹಾಗೂ ವಿಧಾನವನ್ನು ಒಳಗೊಂಡ ಒಂದು ಮಹಜರು ತಯಾರಿಸಿ ಇಬ್ಬರು ಸ್ಥಳೀಯ ವಯಸ್ಕರ ಸಹಿ ಪಡೆಯತಕ್ಕದ್ದು.

ಅಮಲ್ಜಾರಿ ವಿಧಾನ

ನಿಯಮ 34(2)ರಲ್ಲಿ ಹೇಳಿರುವಂತೆ ಅಮಲ್ಜಾರಿ ನಡೆಸಲು ಯಾವೊಂದು ಕ್ರಮದಲ್ಲಿ ನಡೆಸಲೇಕೆಂದು ಡಿಕ್ರಿ ಪಡೆದವರು ಬಯಸದಹೊರತು ಜಾರಿ ಕ್ರಮವು ಸಾಮಾನ್ಯವಾಗಿ ನಿಯಮ 35ರ ಪ್ರಕಾರ ಈ ರೀತಿ ನಡೆಯತಕ್ಕದ್ದು.

- ಮೊದಲು ತೀರ್ಪು ಸಾಲಗಾರನ ಚರಾಸ್ತಿಗಳ ಮೇಲೆ ಜಾರಿ ನಡೆಸುವದು ಹಾಗೂ ಅವಶ್ಯವೆನಿಸಿದರೆ ಸ್ಥಿರಾಸ್ತಿಯ ಮೇಲೂ ಅದೇ ಕಾಲದಲ್ಲಿ ಜಾರಿ ಮಾಡಲು ನಿಯಮದಲ್ಲಿ ಅಡ್ಡಿ ಇರುವದಿಲ್ಲ.
- ಚರಾಸ್ತಿ ಇರದಿದ್ದರೆ ಅಥವಾ ಜಪ್ತಿ ಮಾಡಿ ಮಾರಾಟ ಮಾಡಿದ

ಚರಾಸ್ತಿಯು ಅಥವಾ ಆಸ್ತಿಗಳ ಮಾರಾಟದ ಹಣವು ಡಿಕ್ರಿ ಪಡೆದವರ ಬೇಡಿಕೆ ಹಣವನ್ನು ಪೂರ್ತಿಯಾಗಿ ಪೂರೈಸಲಾಗದಿದ್ದಲ್ಲಿ ಡಿಕ್ರಿ ಪಡೆದವನಿಗೆ ಪರಭಾರೆ ಮಾಡಿದ ಆಸ್ತಿ ಇಲ್ಲವೆ ಬಾಕಿದಾರನಿಗೆ ಸೇರಿದ ಇತರೆ ಸ್ಥಿರಾಸ್ತಿಯ ಮೇಲೆ ಜಾರಿ ಮಾಡತಕ್ಕದ್ದು.

- ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 34 (3)ರಡಿ ನೀಡುವ ಫಾರ್ಮ ನಂ.2ರ ನೋಟೀಸನ್ನು ಜಪ್ತಿ ಹುಕ್ಕುಂ, ತಗಾದೆ ಪತ್ರ (ಡಿಸ್ಟಂಟ್ ವಾರೆಂಟ್) ಎಂದು ಕೂಡಾ ಕರೆಯಲಾಗುತ್ತದೆ. ಇದನ್ನು ಕಟಬಾಕಿದಾರರ ಮೇಲೆ ಜಾರಿ ಮಾಡದೇ ಆತನ ವಾಸಸ್ಥಾನದಲ್ಲಿ ಪ್ರವೇಶ ಮಾಡಲು ಬರುವದಿಲ್ಲ ಹಾಗೆ ಮಾಡಿದಲ್ಲಿ ಭಾರತೀಯ ದಂಡ ಸಂಹಿತೆ 1863 ರಡಿ ಅತೀಕ್ರಮಣ ಪ್ರವೇಶವಾಗುತ್ತದೆ ಅದಕ್ಕೆ ಶಿಕ್ಷೆಯು ಉಂಟು. ಜಪ್ತಿ ಹುಕ್ಕಂನ್ನು ಯಾವ ಬ್ಯಾಂಕಿಗೆ, ಯಾರಿಂದ, ಯಾವ ನ್ಯಾಯಾಲಯದ ಆವಾರ್ಡ ಪ್ರಕಾರ ಎಷ್ಟು ರಕಂ ಬರಬೇಕು, ಅವಾರ್ಡ ತಾರೀಖಿನಿಂದ ವಸೂಲಾಗಬೇಕಾದ ಬಡ್ಡಿಯ ದರ ಇತ್ಯಾದಿ ವಿವರ ಅಲ್ಲದೇ ಜಪ್ತಿ ಮಾಡಲು ಯಾರಿಗೆ ಅಧಿಕಾರ ನೀಡಿದೆ ಎಂಬ ಬಗ್ಗೆ ಸ್ಪಷ್ಟ ನಿರ್ದೇಶನ ಇರುತ್ತದೆ. ಇದನ್ನು ಕೊಡುವವರು ವಸೂಲಾಧಿಕಾರಿ ಆದರೂ ಜಾರಿ ಮಾಡುವವರು ಮಾರಾಟಾಧಿಕಾರಿಯಾಗಿರುತ್ತಾರೆ.

ಚರಸ್ವತ್ತಿನ ಜಪ್ತಿ ಮತ್ತು ಮಾರಾಟ (ನಿಯಮ 36)

* ಮಾರಾಟಾಧಿಕಾರಿಯು ನಿಯಮ 34(3)ರ ಪ್ರಕಾರ ಹೊರಡಿಸಲಾದ ತಗಾದೆ ನೋಟೀಸನ್ನು ನೀಡಬೇಕು.
* ತರುವಾಯ ನಮೂನೆ– 3ರಲ್ಲಿ ಮಾರಾಟಾಧಿಕಾರಿಯು ಜಪ್ತಿ ಮಾಡುವ ದಿನಾಂಕ ತಿಳಿಯಪಡಿಸುತ್ತಾ ಸದರಿ ದಿನದಂದು ಸಜ್ಜಾಗಿರಲು ಸೂಚಿಸುವ ಪತ್ರವನ್ನು ಸಾಲಗಾರರಿಗೆ ಜಾರಿ ಮಾಡತಕ್ಕದ್ದು.
* ಸಾಲಗಾರನು ಗೈರು ಹಾಜರಿದ್ದಲ್ಲಿ ಈ ನೋಟೀಸನ್ನು ಆತನ ಕುಟುಂಬದ ವಯಸ್ಕ ಸದಸ್ಯನ ಮೇಲೆ ಜಾರಿ ಮಾಡತಕ್ಕದ್ದು.
* ಹಾಗೆ ಜಾರಿ ಮಾಡಲಾಗದಿದ್ದರೆ ಸಾಲಗಾರರ ವಾಸಸ್ಥಳದಲ್ಲಿ ಯಾವದಾದರೂ ಎದ್ದು ಕಾಣುವ ಜಾಗದಲ್ಲಿ ನೋಟೀಸಿನ ಪ್ರತಿಯನ್ನು ಅಂಟಿಸತಕ್ಕದ್ದು
* ಜಪ್ತಿಯನ್ನು ಸೂರ್ಯೋದಯಕ್ಕೆ ಮೊದಲು ಹಾಗೂ ಸೂರ್ಯಾಸ್ತಮಾನದ ನಂತರ ಮಾಡತಕ್ಕದ್ದಲ್ಲ (ನಿಯಮ 36(ಸಿ))
* ಜಪ್ತಿಯ ಸಲುವಾಗಿ ವಾಸದ ಮನೆಯೊಳಗೆ ಪ್ರವೇಶಿಸಬಹುದು. ಆದರೆ ನಿರ್ಬಂಧಿಸಲ್ಪಟ್ಟ ಜನಾನಾ ಅಥವಾ ರೂಢಿ ಪದ್ಧತಿಯಂತೆ ಮಹಿಳೆಯರ ವಾಸದ ಉಪಯೋಗಕ್ಕೆ ಮೀಸಲಾದ ಸ್ಥಳ ಹಾಗೂ ರೂಢಿಯ ಮೇರೆಗೆ ಖಾಸಗಿ ಸ್ಥಳಗಳೆಂದು ಪರಿಗಣಿಸಲ್ಪಟ್ಟ ಮನೆಯೊಳಗೆ ಪ್ರವೇಶಿಸುವ ಮೊದಲು ಪೊಲೀಸ ಅಧಿಕಾರಿಯ ಸಮ್ಮುಖದಲ್ಲಿ ಮಹಿಳೆಯರನ್ನು ಹೊರ ಸಾಗಿಸುವ ಬಗ್ಗೆ ನೋಟೀಸನ್ನು ಕೊಟ್ಟನಂತರ ಜನಾನಾ ಕೊಣೆಯೊಳಗಿನ ಸ್ವತ್ತಿನ ಜಪ್ತಿಗಾಗಿ ಪ್ರವೇಶ ಮಾಡಬಹುದು ಹಾಗೂ ಇತರೆ ಚರಸ್ವತ್ತುಗಳನ್ನು ಜಪ್ತಿ ಮಾಡಬಹುದು.
* ಮನೆಯಲ್ಲಿನ ಅಥವಾ ಹೊರಗಿನ ವಸ್ತುಗಳನ್ನು ಜಪ್ತಿ ಮಾಡತ್ಕದ್ದು ಜಪ್ತಿ ಮಾಡಿದ

ಸ್ವತ್ತಿನ ಪಟ್ಟಿಯನ್ನು ಯಾವ ಸ್ಥಳದಲ್ಲಿ ಸ್ವತ್ತನ್ನು ಇಡಬಹುದೋ ಆ ಸ್ಥಳ, ದಿನಾಂಕಗಳ ಬಗ್ಗೆ ಷರಾ

ಬರೆದು ಮಾರಾಟ ವೇಳೆಯ ತಿಳುವಳಿಕೆ ಪತ್ರ ಸಹಿತ ತೀರ್ಪು ಸಾಲಗಾರನ ಸಾಮಾನ್ಯ ವಾಸಸ್ಥಳದ ಮೇಲೆ ಅಂಟಿಸತಕ್ಕದ್ದು.

* ಜಪ್ತಿ ಮಾಡಿದ ಸ್ವತ್ತನ್ನು ಮಾರಾಟಾಧಿಕಾರಿಯು ಡಿಕ್ರಿದಾರನ ವಶಕ್ಕೆ ಒಪ್ಪಿಸತಕ್ಕದ್ದು.
* ಜಪ್ತಿ ಮಾಡಲ್ಪಟ್ಟ ಆಸ್ತಿಯ ಮೌಲ್ಯ ಅತಿ ಹೆಚ್ಚಿಗೆ ಆಗತಕ್ಕದ್ದಲ್ಲ. ಡಿಕ್ರಿದಾರರಿಗೆ ಸಾಲಗಾರರಿಂದ ಬರತಕ್ಕ ಮೊತ್ತಕ್ಕೆ ಸಾಕಾಗುವಷ್ಟು ಇರತಕ್ಕದ್ದು (ನಿಯಮ 36(ಡಿ))

ದಿವಾಣಿ ಪ್ರಕ್ರಿಯಾ ಸಂಹಿತೆ (Civil Procedure Code) 1908ರ ಕಲಂ 60ರ ಮೇರೆಗೆ ಜಪ್ತಿ ಮಾಡಲು ವಿನಾಯಿತಿ ಇರುವ ವಸ್ತುಗಳು *

1. ಅಡಿಗೆ ಪಾತ್ರೆಗಳು
2. ಧರಿಸುವ ಉಡುಪು
3. ಹಾಸಿಗೆಗಳು
4. ಧಾರ್ಮಿಕ ಪದ್ಧತಿ ಪ್ರಕಾರ ಮಹಿಳೆಯರು ಧರಿಸುವ ಆಭರಣಗಳು (ಮಂಗಳ ಸೂತ್ರ, ಕಾಲುಂಗರ ಇತ್ಯಾದಿ)
5. ಬೇಸಾಯದ ಉಪಕರಣಗಳು.
6. ಕಾರ್ಮಿಕನಾಗಿದ್ದರೆ ಕಾರ್ಮಿಕ ಉದ್ಯೋಗದ ಉಪಕರಣಗಳು
7. ಬಿತ್ತನೆಗಾಗಿ ಇಟ್ಟ ಬೀಜಗಳು.
8. ಸಾಲಗಾರನು ಒಂದೇ ಜೊತೆ ಎತ್ತುಗಳನ್ನು ಹೊಂದಿದ್ದಲ್ಲಿ ಆ ಎತ್ತುಗಳು.
9. ಕುಟುಂಬದ ಆಹಾರ ಧಾನ್ಯ.
10. ಲೆಕ್ಕದ ಪುಸ್ತಕಗಳು.
11. ಪೂಜಾ ಸಾಮಾಗ್ರಿಗಳು.
12. ಶಾಲಾ ಮಕ್ಕಳ ಪಠ್ಯಪುಸ್ತಕ.
13. ಕೂಲಿಕಾರರ ಮತ್ತು ಕಾರ್ಮಿಕರ ಮಜೂರಿ
14. ಕಡ್ಡಾಯ ಠೇವಣಿಗಳು.
15. ಸೈನಿಕನಾಗಿದ್ದರೆ ಸೈನಿಕನ ಪೂರ್ಣ ವೇತನ ಮತ್ತು ಭತ್ಯೆ
16. ನೌಕರನಾಗಿದ್ದರೆ ನಿವೃತ್ತಿ ವೇತನ /ನೌಕರನ ವೇತನದ ಅರ್ಧ ಭಾಗ/ ವೇತನವು 100 ರೂಪಾಯಿಗೆ ಮೀರದಿದ್ದರೆ ಪೂರ್ತಿಯಾಗಿ.
17. ಕೃಷಿ ಉತ್ಪನ್ನಗಳ ಪ್ರತಿ ಮಾಹೆಗಾಗಿ ವಯಸ್ಕರಿಗೆ (12 ವರ್ಷ ಮೇಲ್ಪಟ್ಟವರು)

ತಲಾ 20ಕೆ.ಜಿ ಅಕ್ಕಿ (ಭತ್ತವಾದರೆ 40ಕೆಜಿ) ಅಥವಾ ತಲಾ 20ಕೆ.ಜಿ ಗೋದಿ ಅಥವಾ ತಲಾ 20ಕೆ.ಜಿ ರಾಗಿ ಅಥವಾ ತಲಾ 20ಕೆ.ಜಿ ಜೋಳ. ಅಥವಾ 20ಕೆಜಿ ಇತರೆ ಕಾಳುಗಳು. ಮತ್ತು 12ವರ್ಷಕ್ಕಿಂತ ಕೆಳಗಿನವರಿಗೆ ಮೇಲಿನ ಪ್ರಮಾಣದ ಅರ್ಧದಷ್ಟು

* ವಿನಾಯಿತಿ ಇರುವ ವಸ್ತುಗಳನ್ನು ಹೊರತು ಪಡಿಸಿ, ಜಪ್ತಿ ಮಾಡಲ್ಪಟ್ಟ ಚರಸ್ವತ್ತಗಳ ಹೆಸರು ತಯಾರಾದ ವರ್ಷ ಆಕಾರ ಬಣ್ಣ ವಿನ್ಯಾಸ ಇತ್ಯಾದಿ ವಿವರವನ್ನು ಒಳಗೊಂಡಂತೆ ಯಾದಿಯನ್ನು ನಮೂನೆ–4ರಲ್ಲಿ ತಯಾರಿಸಬೇಕು. ಈ ವೇಳೆಯಲ್ಲಿ ಪಂಚನಾಮೆ ಮಾಡಬೇಕು ಹಾಗೂ ಪಂಚರ ಸಹಿ, ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಿಂದ ಸಹಿ ಪಡೆಯಬೇಕು. ಪಂಚಮತಿ ಕಿಮ್ಮತ್ತು ಮಾಡಿ ಪಂಚರ ಸಹಿ ಪಡೆಯಬೇಕು.

ಮುಂದಿನ ಸಂಚಿಕೆಗೆ...

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

(ನೋಂದಣಿ ಸಂಖ್ಯೆ:ಯುಬಿಸಿ/3/98/ನೋಂದಣಿ/34547/2004–05 ದಿನಾಂಕ:06.11.2004)
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003
ದೂರವಾಣಿ ಸಂಖ್ಯೆ:080–23564444 / 23464033
ಇ–ಮೇಲ್ : ksccsfltd@gmail.com

ಸಹಕಾರ ವಾರ್ತಾಪತ್ರಿಕೆಯ ಚಂದಾದಾರರಾಗಲು ಅರ್ಜಿ

1. ಸಹಕಾರ ಪತ್ತಿನ ಸಂಘದ ಹೆಸರು :

2. ಸಂಘದ ನೋಂದಣಿ ಸಂಖ್ಯೆ ಮತ್ತು ತಾರೀಖು :

3. ಸಂಘದ ಪೂರ್ಣ ವಿಳಾಸ :

4. ದೂರವಾಣಿ ಸಂಖ್ಯೆ :

5. ಇ–ಮೇಲ್ ವಿಳಾಸ :

6. ಮಹಾಮಂಡಳದ **ಸಹಕಾರ ವಾರ್ತಾಪತ್ರಿಕೆಯ** ಐದು ವರ್ಷಗಳ ವಾರ್ಷಿಕ ಚಂದಾ : **ರೂ.1500–00**

ನಗದು / ಡಿಡಿ / ಚೆಕ್ ವಿವರ

ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಹಿ (ಮೊಹರಿನೊಂದಿಗೆ)

ಅಧ್ಯಕ್ಷರ ಸಹಿ (ಮೊಹರಿನೊಂದಿಗೆ)

ಮೇಲಿನ ಸಹಕಾರ ವಾರ್ತಾಪತ್ರಿಕೆಯು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ವತಿಯಿಂದ ಪ್ರಕಟಣೆಗೊಳ್ಳುತ್ತಿದ್ದು, ಇದು ರಾಜ್ಯದಲ್ಲಿನ ಪತ್ತಿನ ಚಟುವಟಿಕೆಯುಳ್ಳ ಸಹಕಾರ ಸಂಘಗಳ ಮಧ್ಯೆ ಸಂಪರ್ಕ ಮತ್ತು ಕಾನೂನಿನ ಅರಿವನ್ನು ಹೆಚ್ಚಿಸಲು ಪ್ರಕಟಣೆಗೊಳ್ಳುತ್ತಿರುವ ಪತ್ರಿಕೆಯಾಗಿದ್ದು ಚಂದಾದಾರರು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಪತ್ತಿನ ಸಹಕಾರ ಸಂಘಗಳ ಚಟುವಟಿಕೆಗಳು, ಕಾರ್ಯಾಗಾರಗಳು, ತರಬೇತಿಗಳು ಮತ್ತು ಇನ್ನಿತರೆ ಯಾವುದೇ ಮಾಹಿತಿ ವಿಷಯಗಳಿದ್ದಲ್ಲಿ ಫೋಟೋಗಳ ಸಮೇತ ಮಹಾಮಂಡಳದ ವಿಳಾಸಕ್ಕೆ ಬರೆದು ತಿಳಿಸಲು ಕೋರಲಾಗಿದೆ ಹಾಗೂ ರೂ.1500/–ಗಳನ್ನು ಪಾವತಿಸಿ ವಾರ್ತಾಪತ್ರಿಕೆಯ ಚಂದಾದಾರರಾಗಲು ವಿನಂತಿಸಿದೆ.

ಜಾಹಿರಾತು ಮನವಿ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಕಳೆದ 3 ವರ್ಷಗಳಿಂದ ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ.

ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9986836884, ದೂರವಾಣಿ : 080 23564444, 23464033

ಸಹಕಾರ ಮಾಸಿಕ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಸಹಕಾರ ಮಾಸಿಕ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರು ಈ ಮೂಲಕ ಮನವಿ ಮಾಡಲಾಗಿದೆ.

– ಸಂಪಾದಕರು

ಹಳೆ ಚಿನ್ನಾಭರಣ, ವಾಹನ ಮಾರಾಟಕ್ಕೆ ಜಿಎಸ್‌ಟಿ ಇಲ್ಲ : ಕೇಂದ್ರ ಸ್ಪಷ್ಟನೆ

ನವದೆಹಲಿ : ಹಳೆಯ ಚಿನ್ನಾಭರಣ ಮತ್ತು ಹಳೆಯ ವಾಹನಗಳ ಮಾರಾಟಕ್ಕೆ ಯಾವುದೇ ರೀತಿಯ ಜಿಎಸ್‌ಟಿ ಅನ್ವಯವಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಈ ಕುರಿತಂತೆ ಕಂದಾಯ ಇಲಾಖೆಯ ಕಾರ್ಯದರ್ಶಿ ಹಸ್ಮುಖ್ ಅಧಿಯಾರ ಅವರು ಸ್ಪಷ್ಟನೆ ನೀಡಿದ್ದಾರೆ. ಆಭರಣ ವ್ಯಾಪಾರಿಗೆ ವ್ಯಕ್ತಿಯು ಹಳೆಯ ಚಿನ್ನ ಮಾರಾಟ ಮಾಡವುದು ಕಾಯ್ದೆಯ ಕಲಂ9(4)ರ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ ತೆರಿಗೆ ಪಾವತಿಸಬೇಕಾಗಿಲ್ಲ. ಇದೇ ನೀತಿ ಹಳೆ ಕಾರು, ದ್ವಿಚಕ್ರ ವಾಹನ ಮಾರಾಟಕ್ಕೂ ಅನ್ವಯವಾಗುತ್ತದೆ ಎಂದು ಹೇಳಿದ್ದಾರೆ.

ಅಲ್ಲದೆ, ಫ್ಲ್ಯಾಟ್ ಗಳಲ್ಲಿ ನಿರ್ವಹಣಾ ವೆಚ್ಚವಾಗಿ ಹೌಸಿಂಗ್ ಸೊಸೈಟಿಗಳು ವಿಧಿಸುವ ಮಾಸಿಕ ಶುಲ್ಕ ರು.5 ಸಾವಿರ ಗಿಂತ ಕಡಿಮೆಯಿದ್ದಲ್ಲಿ ಮತ್ತು ವಾರ್ಷಿಕ ರು.20 ಲಕ್ಷಕ್ಕಿಂತ ಮೀರದ ವ್ಯವಹಾರ ನಡೆಸದಿದ್ದಲ್ಲಿ, ಜಿಎಸ್‌ಟಿ ಪಾವತದಿಸುವ ಅಗತ್ಯವಿಲ್ಲವೆಂದೂ ಸ್ಪಷ್ಟಪಡಿಸಿದ್ದಾರೆ.

SAHAKARA VARTHA PATHRIKE
RNI 180/2014
Regn. No. KARKAN 23899
BENGALURU SOUTH

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

ಆಡಳಿತ ಮಂಡಳಿ

ಶ್ರೀ ಸಿ.ಎಂ.ಮಾರೇಗೌಡ
ಅಧ್ಯಕ್ಷರು

ಶ್ರೀ ಬಿ.ಡಿ.ಭೂಕಾಂತ್

ಶ್ರೀ ವಿ. ರಾಜು

ಶ್ರೀ ಶಿವರಾಜ್ ಬಿ.ಪಾಟೀಲ್

ಶ್ರೀ ಎಂ.ಜೆ. ನರೇಂದ್ರಕುಮಾರ

ಶ್ರೀ ಗುರುರಾಜ್ ಹುಣಸಿಮರದ

ಶ್ರೀ ಕೆ.ಎಲ್. ಶಿವರಾಮು

ಶ್ರೀಮತಿ ಕೆ.ಲಲಿತ

ಶ್ರೀ ಡಿ. ಚನ್ನಯ್ಯ

ಶ್ರೀ ಕೆ. ಕೃಷ್ಣಮೂರ್ತಿ

ಶ್ರೀ ಎನ್.ಬಿ. ರವೀಶಯ್ಯ

ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡ

ಶ್ರೀ ಬಿ.ವೀರಯ್ಯ

ಶ್ರೀ ಜಿ. ಮಲ್ಲಿಕಾರ್ಜುನಯ್ಯ

ಶ್ರೀ ತಮ್ಮಣ್ಣ ಬಿ. ಕೆಂಚರೆಡ್ಡಿ

ಡಾ|| ಸಂಜಯ್ ಪಿ.ಹೊಸಮಠ

ಶ್ರೀ ಧರೇಪ್ಪ ಎಂ. ಆಲಗೂರ

ಶ್ರೀ ಗುರುಪಾದಪ್ಪಗೌಡ ಬ. ಪಾಟೀಲ

ಶ್ರೀ ಹೊನ್ನಯ್ಯ ವಿ. ಹಿರೇಮಠ

ಶ್ರೀ ಆಕಾಶ ಪಾಟೀಲ

ಶ್ರೀ ಕೆ.ಎಸ್. ಗುರುಪ್ರಸಾದ್
ಮುಖ್ಯಕಾರ್ಯನಿರ್ವಹಣಾಧಿಕಾರಿ

Printed at Karnataka Off Set Printers,
4th Main, Chamarajapete, Bengaluru - 560 018